# 2026-27 ನೇ ಸಾಲಿನ ಕೃಷಿ ಭಾಗ್ಯ ಯೋಜನೆಯ ಅನುಷ್ಠಾನ ಮಾರ್ಗಸೂಚಿ

ಸಂ: ಜಕೃನಿ(ಬೆಅ)/ಕೃ.ಭಾ.ಯೋ./ಅನುಷ್ಠಾನ/2026-27 ದಿನಾಂಕ:08.05.2026

## 1. ಪೀಠಿಕೆ:

ಕರ್ನಾಟಕ ರಾಜ್ಯವು ಕರ್ನಾಟಕ ರಾಜ್ಯದಲ್ಲಿ ಸುಮಾರು ಶೇ.64 ರಷ್ಟು ಸಾಗುವಳಿ ಪ್ರದೇಶವು ಮಳೆಯಾಶ್ರಿತ ಪ್ರದೇಶವಾಗಿರುತ್ತದೆ. ಮಳೆಯ ಮೇಲೆ ಕೃಷಿಯು ಹೆಚ್ಚು ಅವಲಂಬಿತವಾಗಿರುವುದರಿಂದ ಹವಾಮಾನ ಬದಲಾವಣೆಯಿಂದ ಗಂಭೀರವಾಗಿ ಪ್ರಭಾವಕ್ಕೊಳಗಾಗುವ ರಾಜ್ಯಗಳಲ್ಲಿ ಒಂದಾಗಿದೆ. ರಾಜ್ಯದಲ್ಲಿ ಬೆಳೆ ಹಂಗಾಮುಗಳಲ್ಲಿ ಹೆಚ್ಚುತ್ತಿರುವ ಮಧ್ಯಮ ಶ್ರೇಣಿಯ ಬರ ಮತ್ತು ಪ್ರವಾಹಗಳಿಂದ ಮಳೆಯಾಶ್ರಿತ ಕೃಷಿಯು ಅನಿಶ್ಚಿತವಾಗಿರುತ್ತದೆ. ರಾಜ್ಯದ ಮಳೆಯಾಶ್ರಿತ ಕೃಷಿಯನ್ನು ಜೀವನಾಧಾರಿತ ಕೃಷಿಯಿಂದ ಸುಸ್ಥಿರ ಕೃಷಿಯನ್ನಾಗಿ ರೈತರ ಜೀವನ ಮಟ್ಟವನ್ನು ಉತ್ತಮಪಡಿಸಲು ಕೃಷಿ ಭಾಗ್ಯ ಯೋಜನೆಯನ್ನು ನಿರಂತರವಾಗಿ ಐದು ಒಣ ಹವಾಮಾನ ವಲಯಗಳಲ್ಲಿ ಅನುಷ್ಠಾನಗೊಳಿಸುವ ಉದ್ದೇಶದೊಂದಿಗೆ ಮಳೆಯಾಶ್ರಿತ ಕೃಷಿ ನೀತಿಯನ್ನು ಸರ್ಕಾರದ ಆದೇಶ ಸಂಖ್ಯೆ: ಕೃಇ 08 ಕೃಯೋಕಾ 2014 ಬೆಂಗಳೂರು ದಿನಾಂಕ 22-07-2014 ರಲ್ಲಿ ಹೊರಡಿಸಲಾಗಿರುತ್ತದೆ. ಇದರನ್ವಯ ಮಳೆಯಾಶ್ರಿತ ರೈತರ ಜೀವನಮಟ್ಟವನ್ನು ಉತ್ತಮಪಡಿಸಲು ಕೃಷಿ ಭಾಗ್ಯ ಯೋಜನೆಯನ್ನು (ಮೊದಲನೇ ಹಂತ) 2014-15 ನೇ ಸಾಲಿನಿಂದ 2020-21 ನೇ ಸಾಲಿನ ವರೆಗೆ ರಾಜ್ಯಾದ್ಯಂತ ಅನುಷ್ಠಾನಗೊಳಿಸಲಾಗಿರುತ್ತದೆ.

ರಾಜ್ಯದ ಸುಮಾರು ಶೇ.55 ರಷ್ಟು ಆಹಾರ ಧಾನ್ಯಗಳು ಮತ್ತು ಶೇ.75 ರಷ್ಟು ಎಣ್ಣೆಕಾಳುಗಳ ಉತ್ಪಾದನೆಯು ಮಳೆಯಾಶ್ರಿತ ಪ್ರದೇಶದ ಕೊಡುಗೆಯಾಗಿದೆ. ನೀರಾವರಿ ಪ್ರದೇಶದ ರೈತರಿಗೆ ನೀರಿನ ಲಭ್ಯತೆ ಖಚಿತವಾದ ಕಾರಣ ನೀರಾವರಿಯಲ್ಲಿ ನಿರೀಕ್ಷಿತ ಆದಾಯ ಸಿಗುವುದರಿಂದ, ವಿವಿಧ ಯೋಜನೆಗಳ ಅನುಕೂಲಗಳನ್ನು ಪಡೆದು ವ್ಯವಸಾಯದಲ್ಲಿ ಹೂಡುವಳಿ ಮಾಡುತ್ತಾರೆ. ಆದರೆ ಮಳೆ ಮೇಲೆ ಒಣ ಭೂಮಿ ರೈತರ ಆದಾಯ ಅವಲಂಬಿತವಾಗಿರುವುದರಿಂದ ಈ ಸವಲತ್ತುಗಳನ್ನು ಬಳಸಿಕೊಳ್ಳಲು ಸಾಧ್ಯವಾಗದೆ ಇವರ ಜೀವನೋಪಾಯದ ಮೇಲೆ ಪ್ರಭಾವ ಬೀರಿದೆ. ಕಡಿಮೆ ಮಳೆ ಬೀಳುವ ಬಹುತೇಕ ಪ್ರದೇಶಗಳಲ್ಲಿ, ರೈತರು 1000 ಅಡಿವರೆಗೂ ಕೊಳವೆಬಾವಿ ಕೊರೆಯಲು ರೂ.2.0 ಲಕ್ಷಗಳವರೆಗೆ ವೆಚ್ಚ ಮಾಡುತ್ತಿದ್ದಾರೆ. ಈ ಕೊಳವೆಬಾವಿ ವಿಫಲವಾದರೆ ಅಥವಾ ಕೆಲವು ವರ್ಷಗಳ ನಂತರ ಬತ್ತಿಹೋದ ಸಂದರ್ಭದಲ್ಲಿ ರೈತರು ಸಾಲಬಾಧೆಗೆ ಸಿಲುಕುತ್ತಿದ್ದಾರೆ. ಆದ್ದರಿಂದ ರೈತರು ತಮ್ಮ ಹೂಡಿಕೆಯನ್ನು ಕೊಳವೆಬಾವಿಯ ಬದಲಾಗಿ ಕೃಷಿ ಭಾಗ್ಯ ಯೋಜನೆಯ ಘಟಕಗಳಿಗೆ ಮಾಡಿ ಸುಸ್ಥಿರ ಕೃಷಿಗಾಗಿ ಬಳಸಬಹುದಾಗಿದೆ. ಈ ಹಿನ್ನೆಲೆಯಲ್ಲಿ, 2023-24 ನೇ ಸಾಲಿನಿಂದ ಮರುಜಾರಿಗೊಳಿಸಲಾಗಿದ್ದು, 2026-27 ನೇ ಸಾಲಿಗೆ ಚಾಲ್ತಿ ಯೋಜನೆಗಳಡಿ ಮುಂದುವರೆಸಲಾಗಿದೆ.

2026-27 ನೇ ಸಾಲಿನ ಆಯವ್ಯಯ ಅಂದಾಜು (ಸಂಪುಟ-3) ರಲ್ಲಿ ಪ್ರಸಕ್ತ ಸಾಲಿಗೆ ಕೃಷಿ ಭಾಗ್ಯ ಯೋಜನೆಯ ಅನುಷ್ಠಾನಕ್ಕಾಗಿ ಲೆಕ್ಕ ಶೀರ್ಷಿಕೆ: 2401-00-102-0-27 ರಡಿ ಒಟ್ಟು ರೂ. 100.00 ಕೋಟಿಗಳ ಅನುದಾನವನ್ನು ನಿಗದಿಪಡಿಸಲಾಗಿರುತ್ತದೆ.

**ಯೋಜನಾ ವ್ಯಾಪ್ತಿ:**

ಕೃಷಿ ಭಾಗ್ಯ ಯೋಜನೆಯನ್ನು ರಾಜ್ಯಾದ್ಯಂತ ಎಲ್ಲಾ ಜಿಲ್ಲೆಗಳಲ್ಲಿ (ಅಚ್ಚುಕಟ್ಟು ಪ್ರದೇಶ ಒಳಗೊಂಡಂತೆ) ಅನುಷ್ಠಾನ ಮಾಡಲಾಗುವುದು.

ಕೃಷಿ ಭಾಗ್ಯ ಯೋಜನೆಯ 2026-27 ನೇ ಸಾಲಿನ ಜಿಲ್ಲಾವಾರು ಹಾಗೂ ವರ್ಗವಾರು ವಾರ್ಷಿಕ ಕ್ರಿಯಾ ಯೋಜನೆಯನ್ನು **ಅನುಬಂಧ- A1 ರಿಂದ A3** ರಲ್ಲಿ ಲಗತ್ತಿಸಿದೆ.

ಕೃಷಿ ಭಾಗ್ಯ ಪ್ಯಾಕೇಜ್ ಯೋಜನೆಯ ಈ ಕೆಳಗಿನ ಅನುಷ್ಠಾನ ಮಾರ್ಗಸೂಚಿಗಳು **ರಾಜ್ಯ ವಿಪತ್ತು ಉಪಶಮನ ನಿಧಿ (SDMF- State Disaster Mitigation Fund)** ಹಾಗೂ ಇನ್ನಿತರೆ ಯೋಜನೆಗಳಿಂದ ಒದಗಿಸುವ ಅನುದಾನಕ್ಕೆ ಸಹ ಅನ್ವಯಿಸುತ್ತವೆ.

**1. ಯೋಜನೆಯ ಗುರಿ:**

ರಾಜ್ಯಾದ್ಯಂತ ಸುಸ್ಥಿರ ಕೃಷಿಯನ್ನು ಉತ್ತೇಜಿಸಿ, ಬೆಳೆ ಉತ್ಪಾದಕತೆ ಮತ್ತು ರೈತರ ಜೀವನಮಟ್ಟವನ್ನು ಸುಧಾರಿಸುವುದರೊಂದಿಗೆ ಬರ ಉಪಶಮನದ ಗುರಿಯನ್ನು ಹೊಂದಿರುತ್ತದೆ.

**2. ಯೋಜನೆಯ ಉದ್ದೇಶಗಳು:**

1. ರಾಜ್ಯದ ಮಳೆಯಾಶ್ರಿತ ಕೃಷಿಯನ್ನು ಸುಸ್ಥಿರ ಕೃಷಿಯನ್ನಾಗಿ ರೂಪಾಂತರಗೊಳಿಸುವುದು.
2. ಸಮರ್ಪಕ ಮಳೆ ನೀರಿನ ಸಂಗ್ರಹಣೆ ಹಾಗೂ ಉಪಯುಕ್ತ ಬಳಕೆ ಪದ್ಧತಿಯಿಂದ ಕೃಷಿ ಉತ್ಪಾದಕತೆಯನ್ನು ಉತ್ತಮ ಪಡಿಸುವುದು ಮತ್ತು ಆದಾಯವನ್ನು ಹೆಚ್ಚಿಸುವುದು.
3. ಮಳೆ ನೀರನ್ನು ವ್ಯರ್ಥ ಮಾಡದೆ ಆಯ್ದ ಸ್ಥಳದಲ್ಲಿ ಕೃಷಿ ಹೊಂಡ ತೆಗೆದು ಜಲ ಸಂಗ್ರಹಿಸಿ, ಬೆಳೆಗಳ ಸಂದಿಗ್ಧ ಹಂತಗಳಲ್ಲಿ ರಕ್ಷಣಾತ್ಮಕ ನೀರಾವರಿ ಒದಗಿಸುವುದು

**ಕೃಷಿ ಭಾಗ್ಯ ಯೋಜನೆಯಡಿ ಒದಗಿಸಲಾಗುವ ಸೌಲಭ್ಯಗಳ/ಘಟಕಗಳ ವಿವರಗಳು:**

ಕೃಷಿ ಭಾಗ್ಯ ಪ್ಯಾಕೇಜ್‌ನಲ್ಲಿ ಈ ಕೆಳಗಿನಂತೆ ಒಟ್ಟಾರೆ 6 ಘಟಕಗಳನ್ನು ಒಳಗೊಂಡಿದ್ದು ಎಲ್ಲಾ ಘಟಕಗಳನ್ನು ಫಲಾನುಭವಿ ರೈತರು ಯೋಜನೆಯ ಸಮಗ್ರ ಸದುಪಯೋಗ ಪಡೆಯಲು ತಪ್ಪದೇ ಅಳವಡಿಸುವುದು.

1. ಕ್ಷೇತ್ರ ಬದು ನಿರ್ಮಾಣ
2. ನೀರು ಸಂಗ್ರಹಣಾ ರಚನೆ ನಿರ್ಮಾಣ (ಕೃಷಿ ಹೊಂಡ)
3. ನೀರು ಇಂಗದಂತೆ ತಡೆಯಲು ಪಾಲಿಥೀನ್ ಹೊದಿಕೆ
4. ಕೃಷಿ ಹೊಂಡದ ಸುತ್ತಲೂ ತಂತಿ ಬೇಲಿ (GI Wire Fencing)
5. ಹೊಂಡದಿಂದ ನೀರು ಎತ್ತಲು ಡೀಸೆಲ್ /ಪೆಟ್ರೋಲ್/ಸೋಲಾರ್ ಪಂಪ್ ಸೆಟ್
6. ನೀರನ್ನು ಬೆಳೆಗೆ ಹಾಯಿಸಲು ಸೂಕ್ಷ್ಮ (ತುಂತುರು/ಹನಿ) ನೀರಾವರಿ (PM-RKVY-PDMC/ Atal Bhu Jal ಯೋಜನೆಯ ಮೂಲಕ ಚಾಲ್ತಿ ಮಾರ್ಗಸೂಚಿಯಂತೆ)

**ಕೃಷಿ ಭಾಗ್ಯ ಯೋಜನೆಯಡಿ ನೀಡಲಾಗುವ ಸೌಲಭ್ಯಗಳ ಸಹಾಯಧನದ ವಿವರ**

| ಕ್ರ. ಸಂ | ಘಟಕ | ಸಹಾಯಧನ (%) | |
|---|---|---|---|
| | | ಸಾಮಾನ್ಯ | ಪ.ಜಾತಿ/ ಪ.ಪಂಗಡ |
| 1 | ಕ್ಷೇತ್ರ ಬದು ನಿರ್ಮಾಣ | 80 | 90 |
| 2 | ನೀರು ಸಂಗ್ರಹಣಾ ರಚನೆ (ಕೃಷಿ ಹೊಂಡ ) | 80 | 90 |
| 3 | ನೀರು ಇಂಗದಂತೆ ತಡೆಯಲು ಪಾಲಿಥೀನ್ ಹೊದಿಕೆ (ಸಾಮಾನ್ಯ ವರ್ಗಕ್ಕೆ ಗರಿಷ್ಠ-ರೂ.70,000 ಹಾಗೂ ಪ.ಜಾತಿ/ಪ.ಪಂಗಡಕ್ಕೆ ಗರಿಷ್ಠ-ರೂ.80,000 ಮಿತಿಯಲ್ಲಿ) | 80 | 90 |
| 4 | ಕೃಷಿ ಹೊಂಡದ ಸುತ್ತಲೂ ತಂತಿ ಬೇಲಿ (GI Wire Fencing) | 40 | 50 |
| 5 | ಹೊಂಡದಿಂದ ನೀರು ಎತ್ತಲು ಡೀಸೆಲ್ / ಪೆಟ್ರೋಲ್/ಸೋಲಾರ್ ಪಂಪ್ ಸೆಟ್ (upto 10 HP) (**ಷರಾ:** ಸೋಲಾರ್ ಪಂಪ್‌ಸೆಟ್ ಅಳವಡಿಸಿದ ಫಲಾನುಭವಿಗಳಿಗೆ ರೂ.30,000/- ಗಳ ಪ್ರೋತ್ಸಾಹಧನ ನೀಡುವುದು) | 80 | 90 |
| 6 | ನೀರನ್ನು ಬೆಳೆಗೆ ಹಾಯಿಸಲು ಸೂಕ್ಷ್ಮ (ತುಂತುರು/ಹನಿ) ನೀರಾವರಿ (PM-RKVY-PDMC / Atal Bhu Jal ಯೋಜನೆಯಡಿ ಚಾಲ್ತಿ ಮಾರ್ಗಸೂಚಿಯಂತೆ ಒಗ್ಗೂಡಿಸುವಿಕೆಯ ಮೂಲಕ) | 90 | 90 |

**ವಿಶೇಷ ಸೂಚನೆ:**

- ಕೃಷಿ ಹೊಂಡ, ನೀರು ಇಂಗದಂತೆ ತಡೆಯಲು ಪಾಲಿಥೀನ್ ಹೊದಿಕೆ/ಪರ್ಯಾಯ ಮಾದರಿಗಳು, ಕೃಷಿ ಹೊಂಡದ ಸುತ್ತಲೂ ತಂತಿ ಬೇಲಿ (GI Wire Fencing) ಹಾಗೂ ಸೂಚನಾ ಫಲಕ ಘಟಕಗಳಿಗೆ ಕೃಷಿ ಭಾಗ್ಯ ಯೋಜನೆಯಡಿ ವೆಚ್ಚ ಭರಿಸುವುದು.
- ಫಲಾನುಭವಿಗಳು ಬದು ಘಟಕ, ಡೀಸೆಲ್ /ಪೆಟ್ರೋಲ್/ ಸೋಲಾರ್ ಪಂಪ್‌ಸೆಟ್ ಘಟಕಗಳನ್ನು ಇತರೆ ಚಾಲ್ತಿ ಯೋಜನೆಗಳಡಿ ಪಡೆಯಲು ಅವಕಾಶವಿದ್ದಲ್ಲಿ ಪಡೆಯಬಹುದಾಗಿದೆ (ಉದಾ: ಬದು ನಿರ್ಮಾಣ (MGNREGA/PMKSY-WDC-2.0 ಇತ್ಯಾದಿ); ಡೀಸೆಲ್ /ಪೆಟ್ರೋಲ್ ಪಂಪ್‌ಸೆಟ್ (SMAM/STATE FM ಇತ್ಯಾದಿ) /ಸೋಲಾರ್ ಪಂಪ್ ಸೆಟ್ (PM-KUSUM/ತೋಟಗಾರಿಕಾ ಇಲಾಖೆ, ಇತ್ಯಾದಿ). ಈಗಾಗಲೇ ಸದರಿ ಘಟಕ ಹೊಂದಿದ್ದಲ್ಲಿ/ಇತರೆ ಯೋಜನೆಗಳಡಿ ಪಡೆದು ಬಳಕೆ ಮಾಡುತ್ತಿದ್ದಲ್ಲಿ 'ಅಸ್ತಿತ್ವದಲ್ಲಿರುವ ಘಟಕ' ಎಂದು ಪರಿಗಣಿಸುವುದು.
- ಸೂಕ್ಷ್ಮ ನೀರಾವರಿ (ತುಂತುರು/ಹನಿ ನೀರಾವರಿ) ಘಟಕವನ್ನು PM-RKVY-PDMC/ಅಟಲ್ ಭೂಜಲ ಯೋಜನೆ ಅಥವಾ ಇತರೆ ಇಲಾಖೆಗಳ ಚಾಲ್ತಿ ಯೋಜನೆಗಳಡಿ ಪಡೆಯುವುದು. ಈಗಾಗಲೇ ಸದರಿ ಘಟಕ ಹೊಂದಿದ್ದಲ್ಲಿ/ಇತರೆ ಯೋಜನೆಗಳಡಿ ಸದರಿ ಘಟಕ ಪಡೆದು ಬಳಕೆ ಮಾಡುತ್ತಿದ್ದಲ್ಲಿ 'ಅಸ್ತಿತ್ವದಲ್ಲಿರುವ ಘಟಕ' ಎಂದು ಪರಿಗಣಿಸುವುದು.

- ಎಲ್ಲಾ ಘಟಕಗಳನ್ನು ಪ್ಯಾಕೇಜ್ ಮಾದರಿಯಲ್ಲಿ ಅನುಷ್ಠಾನಗೊಳಿಸಿದರೆ ಯೋಜನೆಯ ಉದ್ದೇಶ ಈಡೇರುತ್ತದೆ. ಆದುದರಿಂದ ರೈತರಿಗೆ ಎಲ್ಲಾ ಘಟಕಗಳನ್ನು ಅಳವಡಿಕೆ ಮಾಡಿಕೊಳ್ಳಲು ಮನವರಿಕೆ ಮಾಡಿ ಅನುಷ್ಠಾನ ಮಾಡುವುದು.

## ಕೃಷಿ ಭಾಗ್ಯ ಯೋಜನೆಯ ಅನುಷ್ಠಾನ ಮಾರ್ಗಸೂಚಿಗಳು:

### 3.1: ಅರಿವು ಮೂಡಿಸುವ ಕಾರ್ಯಕ್ರಮ/ ತರಬೇತಿಗಳು:

- ಕೃಷಿ ಭಾಗ್ಯ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಯೋಜನೆಯ ಬಗ್ಗೆ ರೈತರಿಗೆ ಪತ್ರಿಕಾ ಪ್ರಕಟಣೆ/ಸಮೂಹ ಮಾಧ್ಯಮಗಳ ಮೂಲಕ ವ್ಯಾಪಕ ಪ್ರಚಾರವನ್ನು ಕಡ್ಡಾಯವಾಗಿ ಕೈಗೊಳ್ಳುವುದು.
- ಜಿಲ್ಲಾ ಮಟ್ಟದಲ್ಲಿ ಕೃಷಿ ಹಾಗೂ ಕೃಷಿಯೇತರ ಇಲಾಖಾ ಅಧಿಕಾರಿಗಳಿಗೆ, ಜನ ಪ್ರತಿನಿಧಿಗಳಿಗೆ ಅರಿವು ಮೂಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳುವುದು.
- ತಾಲ್ಲೂಕು/ ಹೋಬಳಿ/ ಗ್ರಾಮ ಮಟ್ಟದಲ್ಲಿ ಪ್ರಗತಿಪರ ರೈತರಿಗೆ/ ರೈತ ಫಲಾನುಭವಿಗಳಿಗೆ ಪ್ಯಾಕೇಜಿನ ಬಗ್ಗೆ ವಿವರವಾದ ಮಾಹಿತಿಯೊಂದಿಗೆ ಅರಿವು ಮೂಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳುವುದು.

### 3.2: ಫಲಾನುಭವಿಯ ಆಯ್ಕೆ:

- ರಾಜ್ಯದ ಎಲ್ಲಾ ಜಿಲ್ಲೆ/ತಾಲ್ಲೂಕಿನ ರೈತರ ಅವಶ್ಯಕತೆಗನುಗುಣವಾಗಿ ಅಚ್ಚುಕಟ್ಟು ಪ್ರದೇಶವನ್ನೂ ಒಳಗೊಂಡಂತೆ ಕಾರ್ಯಕ್ರಮ ಅನುಷ್ಠಾನ ಮಾಡುವುದು
- ರಾಜ್ಯದ ಯಾವುದೇ ಆಸಕ್ತ ರೈತರು ಕೃಷಿ ಭಾಗ್ಯ ಯೋಜನೆಯನ್ನು ಅನುಷ್ಠಾನ ಮಾಡಲು ಇಚ್ಛಿಸಿದಲ್ಲಿ ಅಂತಹ ರೈತರಿಂದ ಅರ್ಜಿಗಳನ್ನು ಸ್ವೀಕರಿಸುವುದು. K-KISAN ತಂತ್ರಾಂಶದಲ್ಲಿ ಅರ್ಜಿ ನೋಂದಣಿ ಮಾಡಿ, ಕ್ಷೇತ್ರ ಪರಿಶೀಲನೆ (Pre-Inspection) ಕೈಗೊಂಡು ಆಯ್ಕೆಯಾದ ಅರ್ಹ ಅರ್ಜಿಗಳಿಗೆ ಜೇಷ್ಠತೆಯ ಆಧಾರದ ಮೇಲೆ ಕಾರ್ಯಾದೇಶ ನೀಡುವುದು ಹಾಗೂ ಅನುದಾನ ಲಭ್ಯತೆಯನುಸಾರ ಕಾರ್ಯಕ್ರಮ ಅನುಷ್ಠಾನಗೊಳಿಸುವುದು.
- ರೈತ ಸಂಪರ್ಕ ಕೇಂದ್ರಗಳಲ್ಲಿ ಸ್ವೀಕೃತವಾದ ಅರ್ಜಿಗಳ ಜೇಷ್ಠತೆಯನ್ನು ವಹಿಯಲ್ಲಿ ಪ್ರತ್ಯೇಕವಾಗಿ ನಿರ್ವಹಿಸುವುದು.
- ನಿಗದಿತ ಗುರಿಗಳಿಂತ ಹೆಚ್ಚಿನ ಸಂಖ್ಯೆಯಲ್ಲಿ ಅರ್ಜಿ ಸ್ವೀಕೃತವಾಗಿ ಜೇಷ್ಠತೆಯನ್ವಯ ಫಲಾನುಭವಿ ಆಯ್ಕೆಯು ಸಾಧ್ಯವಾಗದ ಪಕ್ಷದಲ್ಲಿ; ಅವಶ್ಯವಿರುವ ಜಿಲ್ಲೆಗಳಲ್ಲಿ ಮಾತ್ರ ಲಾಟರಿ ಪ್ರಕ್ರಿಯೆಗೆ ಜಿಲ್ಲಾ ಮಟ್ಟದ ಸಮನ್ವಯ ಸಮಿತಿಯಲ್ಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಅನುಮೋದನೆ ಪಡೆದು ಲಾಟರಿ ಮುಖಾಂತರ ಫಲಾನುಭವಿ ಆಯ್ಕೆ ಮಾಡುವುದು.
- 15X15X3 ಮೀ., 18X18X3 ಮೀ. ಹಾಗೂ 21X21X3 ಮೀ. ಅಳತೆಯ ಕೃಷಿ ಹೊಂಡ ನಿರ್ಮಾಣಕ್ಕೆ ರೈತರ ಒಟ್ಟು ಸಾಗುವಳಿ ಕ್ಷೇತ್ರದ ಒಂದು ಸರ್ವೆ ನಂಬರ್ ನಲ್ಲಿ ಕನಿಷ್ಠ 1.0 ಎಕರೆ ಇರಬೇಕು (single land parcel).

ಆದಾಗ್ಯೂ, ರೈತರು 0.50 ಎಕರೆ ಸಾಗುವಳಿ ಕ್ಷೇತ್ರ ಹೊಂದಿದ್ದಲ್ಲಿ ಅವರ ಜಮೀನು ಒಳಗೊಂಡಂತೆ ಒಟ್ಟು ಮಳೆ ನೀರಿನ Catchment ಪ್ರದೇಶ ಕನಿಷ್ಠ 1.0 ಎಕರೆ ಇರುವುದನ್ನು ಖಚಿತಪಡಿಸಿಕೊಂಡು ರೈತರ ಅವಶ್ಯಕತೆಯನುಸಾರ ಕನಿಷ್ಠ ಅಳತೆಯ (ಕೆಂಪು/ಜಂಬಿಟ್ಟಿಗೆ ಮಣ್ಣು: 10X10X3 ಮೀ / 12X12X3 ಮೀ. ; ಕಪ್ಪು ಮಣ್ಣು: 12X12X3 ಮೀ.) ಕೃಷಿ ಹೊಂಡ ನಿರ್ಮಿಸಲು ಮಾತ್ರ ಅವಕಾಶ ಕಲ್ಪಿಸಲಾಗಿದೆ (ಸರ್ಕಾರದ ಆದೇಶ ಸಂ. AGRI/59/ASC/2025 ದಿನಾಂಕ 28.04.2025).

- ಹಿಂದಿನ ಸಾಲುಗಳಲ್ಲಿ ಕೃಷಿ ಭಾಗ್ಯ ಯೋಜನೆ ಅಥವಾ ಇನ್ಯಾವುದೇ ಯೋಜನೆಯಡಿ ಕೃಷಿ ಹೊಂಡ ಫಲಾನುಭವಿಯಾಗಿರುವ ರೈತರು ಸದರಿ ಯೋಜನೆಗೆ ಅರ್ಹತೆ ಹೊಂದಿರುವುದಿಲ್ಲ (ಕೆ-ಕಿಸಾನ್ ಪೋರ್ಟಲ್ ನಡಿ/ ಭೌತಿಕವಾಗಿ ಸ್ಥಳ ಪರಿಶೀಲಿಸಿ ಖಾತರಿಪಡಿಸಿಕೊಳ್ಳುವುದು).
- ಪರಿಶಿಷ್ಠ ಜಾತಿ/ ಪರಿಶಿಷ್ಠ ಪಂಗಡದ ರೈತರಿಗೆ ಸರ್ಕಾರದ ನಿರ್ದಿಷ್ಟ ಅನುಪಾತದನ್ವಯ ನೀಡುವುದು.
- ರೈತರಿಂದ ನಿಗದಿತ ನಮೂನೆಯಲ್ಲಿ ಸ್ವೀಕರಿಸಿದ ಅರ್ಜಿಗಳನ್ವಯ ಕೃಷಿ ಭಾಗ್ಯ ಯೋಜನೆಯ ಪೂರ್ಣ ಪ್ಯಾಕೇಜ್‌ನ ಘಟಕಗಳನ್ನು ಅನುಷ್ಠಾನಗೊಳಿಸಲು ಆಸಕ್ತಿಯಿರುವ ಬಗ್ಗೆ ದೃಢೀಕರಿಸಿಕೊಂಡು ಅಂತಹ ರೈತರನ್ನು ಆಯ್ಕೆ ಮಾಡಿ ಕ್ಷೇತ್ರ ಪರಿಶೀಲನೆ (Pre-Inspection) ಕೈಗೊಳ್ಳುವುದು.
- ಕ್ಷೇತ್ರ ಪರಿಶೀಲನೆ (Pre-Inspection) ಯಲ್ಲಿ ಅರ್ಹತೆ ಪಡೆದ ಅರ್ಜಿದಾರರನ್ನು ಮಾತ್ರ ಆಯ್ಕೆ ಮಾಡಿ ಕಾರ್ಯಾದೇಶ ನೀಡುವುದು.
- ರೈತರ ಬೇಡಿಕೆಗನುಗುಣವಾಗಿ ಜಿಲ್ಲೆಯಲ್ಲಿ ಲಭ್ಯವಿರುವ ಅನುದಾನಕ್ಕೆ ತಕ್ಕಂತೆ ಅನುಷ್ಠಾನ ಮಾಡುವುದು
- ಜಿಲ್ಲೆಗಳಿಗೆ ಯೋಜನೆಯಡಿ ನೀಡಿರುವ ಗುರಿಗಳನ್ನು ತಾಲ್ಲೂಕುಗಳಲ್ಲಿನ ಅನುಷ್ಠಾನ ಪ್ರಗತಿಗನುಗುಣವಾಗಿ ಲಭ್ಯವಿರುವ ಅನುದಾನ ಮಿತಿಯೊಳಗೆ ಬದಲಾವಣೆ ಮಾಡಲು ಅವಕಾಶವಿರುತ್ತದೆ.

**ರೈತರಿಂದ ಅರ್ಜಿಗಳ ಆಹ್ವಾನ:**

- ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರು ರೈತರ ಅರ್ಜಿ ನಮೂನೆಯನ್ನು ತಮ್ಮ ಹಂತದಲ್ಲೇ ಮುದ್ರಿಸುವುದು. ಸದರಿ ಅರ್ಜಿಗಳನ್ನು ಎಲ್ಲಾ ರೈತ ಸಂಪರ್ಕ ಕೇಂದ್ರಗಳಲ್ಲಿ ಲಭ್ಯವಿರಿಸುವುದು.
- ಭೌತಿಕ ಗುರಿಯನ್ವಯ ಶೇ 20 ರಷ್ಟು ಹೆಚ್ಚಿನ ಅರ್ಜಿಗಳನ್ನು ಸ್ವೀಕರಿಸುವುದು ಹಾಗೂ ಹೆಚ್ಚುವರಿಯಾದ ಸದರಿ ಅರ್ಜಿಗಳನ್ನು ಜೇಷ್ಟತೆಯಲ್ಲಿ ಕಾಯ್ದಿರಿಸುವುದು. ಕಾರ್ಯಾದೇಶ ನೀಡಿದ 15-30 ದಿನಗಳೊಳಗಾಗಿ ಕೃಷಿ ಹೊಂಡ ನಿರ್ಮಿಸದೇ ಇರುವ ಫಲಾನುಭವಿಗಳ ಅರ್ಜಿಗಳನ್ನು ಸ್ಥಗಿತಗೊಳಿಸಿ ಇತರೆ ಆಸಕ್ತ ಅರ್ಹ ಫಲಾನುಭವಿಗಳ ಅರ್ಜಿಗಳನ್ನು ಜೇಷ್ಠತೆಯ ಆಧಾರದ ಮೇಲೆ ಪರಿಗಣಿಸಬಹುದು.

**ಸೂಚನೆ:** ಸಹಾಯಕ ಕೃಷಿ ನಿರ್ದೇಶಕರ ಕಚೇರಿಯಿಂದ ರೈತ ಸಂಪರ್ಕ ಕೇಂದ್ರವಾರು ಗುರಿ ನಿಗದಿಪಡಿಸುವುದು ಹಾಗೂ ರೈ.ಸಂ. ಕೇಂದ್ರದ ಅಧಿಕಾರಿಗಳು ಸದರಿ ಗುರಿಗೆ ಬದ್ಧರಾಗಿರುವುದು.

### 3.3: ಫಲಾನುಭವಿ ನೋಂದಣಿ:

- ಮೇಲಿನ ಮಾನದಂಡಗಳನ್ವಯ ಅರ್ಹ ರೈತರು ನಿಗದಿತ ಅರ್ಜಿ ನಮೂನೆಯಲ್ಲಿ (ನಮೂನೆ-1-ಲಗತ್ತಿಸಿದೆ) ಮಾಹಿತಿಯನ್ನು ಭರ್ತಿ ಮಾಡಿ ಅಗತ್ಯ ದಾಖಲೆಗಳೊಂದಿಗೆ ರೈತ ಸಂಪರ್ಕ ಕೇಂದ್ರಕ್ಕೆ ಸಲ್ಲಿಸುವುದು.
- ರೈತ ಸಂಪರ್ಕ ಕೇಂದ್ರದ ಅಧಿಕಾರಿ/ ಸಿಬ್ಬಂದಿಯು ಅರ್ಜಿಯಲ್ಲಿನ ಮಾಹಿತಿಯನ್ನು ಭರ್ತಿ ಮಾಡಲು ರೈತರಿಗೆ ಮಾರ್ಗದರ್ಶನ ನೀಡುವುದು. ಅರ್ಜಿಯನ್ನು ಸ್ವೀಕರಿಸಿ ಪರಿಶೀಲಿಸುವುದು ಹಾಗೂ ಅರ್ಹವಾದ ಎಲ್ಲ ಅರ್ಜಿಗಳನ್ನು K-KISAN ತಂತ್ರಾಂಶದಲ್ಲಿ ನೋಂದಾಯಿಸುವುದು.
- ರೈತರು ಸೂಕ್ಷ್ಮ ನೀರಾವರಿ ಘಟಕವನ್ನು ಚಾಲ್ತಿಯಲ್ಲಿರುವ ಸೂಕ್ಷ್ಮ ನೀರಾವರಿ ಯೋಜನೆಗಳ ಮಾರ್ಗಸೂಚಿಯನ್ವಯ ಪಡೆಯಲು ಅವಕಾಶ ಕಲ್ಪಿಸುವುದು. (ಕೇಂದ್ರ ಪುರಸ್ಕೃತ PM-RKVY-PDMC ಯೋಜನೆಯಡಿ ಎಲ್ಲಾ ವರ್ಗಗಳ ರೈತರಿಗೆ ಒಂದೇ ಜಮೀನಿಗೆ ಪ್ರತಿ 7 ವರ್ಷಕ್ಕೊಮ್ಮೆ ಮಾತ್ರ ಸಹಾಯಧನದಡಿ ಸೂಕ್ಷ್ಮ ನೀರಾವರಿ ಘಟಕವನ್ನು ಪಡೆಯಲು ಅವಕಾಶ ಕಲ್ಪಿಸಲಾಗಿದೆ).
- ಹಾಗೆಯೇ ರೈತರು ಈಗಾಗಲೇ ಡೀಸೆಲ್/ಪೆಟ್ರೋಲ್/ಸೋಲಾರ್ ಪಂಪ್‌ಸೆಟ್ ಘಟಕವನ್ನು ಇಲಾಖೆಯ ಇತರೆ ಯೋಜನೆಗಳಡಿ ಪಡೆದಿದ್ದಲ್ಲಿ ಅಂತಹ ಅರ್ಜಿದಾರರಿಗೆ ಡೀಸೆಲ್/ ಪೆಟ್ರೋಲ್ /ಸೋಲಾರ್ ಪಂಪ್‌ಸೆಟ್ ನೀಡಲು ಅವಕಾಶವಿರುವುದಿಲ್ಲ.
- ಅನುದಾನ ಲಭ್ಯತೆಯ ಆಧಾರದ ಮೇಲೆ ಎಲ್ಲಾ ಆಸಕ್ತ ರೈತರಿಗೂ ಪ್ಯಾಕೇಜ್ ಮಾದರಿಯಲ್ಲಿ ಸೌಲಭ್ಯ ಕಲ್ಪಿಸಿಕೊಡಲು ಕ್ರಮ ಕೈಗೊಳ್ಳುವುದು.

### 3.4: ಅರ್ಜಿದಾರರ ಕ್ಷೇತ್ರ ಪರಿಶೀಲನೆ:

- ನೊಂದಾಯಿಸಿದ ಅರ್ಹ ಅರ್ಜಿಗಳನ್ನು ಪ್ರಸಕ್ತ ಸಾಲಿನಲ್ಲಿ ಜಿಲ್ಲಾವಾರು ನಿಗದಿಪಡಿಸಿದ ವಾರ್ಷಿಕ ಕಾರ್ಯಕ್ರಮದನ್ವಯ ಜೇಷ್ಠತೆಯನುಸಾರ K-KISAN ತಂತ್ರಾಂಶದಲ್ಲಿ ಆಯ್ಕೆ (Selection/ Acceptance stage) ಮಾಡುವುದು.
- ರೈತ ಸಂಪರ್ಕ ಕೇಂದ್ರದ ಕೃಷಿ ಅಧಿಕಾರಿ/ಸಹಾಯಕ ಕೃಷಿ ಅಧಿಕಾರಿಯು ಆಯ್ಕೆಯಾದ ಅರ್ಜಿದಾರರ ಕ್ಷೇತ್ರ ಪರಿಶೀಲನೆಯನ್ನು (Pre-inspection) K-KISAN Mobile ತಂತ್ರಾಂಶದ ಮೂಲಕ 7 ದಿನಗಳೊಳಗೆ ಕೈಗೊಳ್ಳುವುದು.
- ಕ್ಷೇತ್ರ ಪರಿಶೀಲನೆಯಲ್ಲಿ ರೈತರು ಹೊಂದಿದ ಹಿಡುವಳಿ ಪ್ರದೇಶ, ನೀರು ಸಂಗ್ರಹಣಾ ಪ್ರದೇಶದ ಅಳತೆ (Catchment area) ಆಧರಿಸಿ ಅದರನ್ವಯ ಅನುಷ್ಠಾನಗೊಳಿಸಬಹುದಾದ ಕೃಷಿ ಹೊಂಡಗಳ ಗಾತ್ರವನ್ನು ರೈತರ ಇಚ್ಛೆಯಂತೆ ನಿರ್ಧರಿಸುವುದು.
- ಕ್ಷೇತ್ರ ಪರಿಶೀಲನೆಯಲ್ಲಿ **12X12X3 ಮೀ ಮೇಲ್ಪಟ್ಟ ಅಳತೆಯ ಕೃಷಿ ಹೊಂಡ ನಿರ್ಮಾಣಕ್ಕೆ** ರೈತರ ಒಟ್ಟು ಸಾಗುವಳಿ ಕ್ಷೇತ್ರದ ಒಂದು ಸರ್ವೆ ನಂಬರ್ ನಲ್ಲಿ ಕನಿಷ್ಠ 1 ಎಕರೆ ಇರುವುದನ್ನು ದೃಢೀಕರಿಸಿಕೊಳ್ಳುವುದು (ಇಲ್ಲವಾದಲ್ಲಿ ರೈತರ 1 ಎಕರೆ ಸಾಗುವಳಿ ಕ್ಷೇತ್ರವು ಒಂದಕ್ಕಿಂತ ಹೆಚ್ಚು ಸರ್ವೆ ನಂಬರ್ ನಲ್ಲಿ ಒಂದೇ ಪ್ರದೇಶದಲ್ಲಿ ಇರುವುದನ್ನು ದೃಢೀಕರಿಸಿಕೊಳ್ಳುವುದು).
- **0.50 ಎಕರೆ ಸಾಗುವಳಿ ಕ್ಷೇತ್ರ ಹೊಂದಿರುವ ರೈತರಿಗೆ 10X10X3 ಮೀ / 12X12X3 ಮೀ ಅಳತೆಯ ಕೃಷಿ ಹೊಂಡ ನಿರ್ಮಿಸಲು ಅವರ ಜಮೀನು ಒಳಗೊಂಡಂತೆ ಒಟ್ಟು ಮಳೆ ನೀರಿನ Catchment ಪ್ರದೇಶ ಕನಿಷ್ಠ 1.0 ಎಕರೆ ಇರುವುದನ್ನು ಕ್ಷೇತ್ರ ಪರಿಶೀಲನೆಯಲ್ಲಿ ದೃಢೀಕರಿಸಿಕೊಳ್ಳುವುದು.**

### 3.5: ಫಲಾನುಭವಿಗಳ ಆಯ್ಕೆ ನಂತರದ ಪ್ರಕ್ರಿಯೆಗಳು:

- ರೈತ ಸಂಪರ್ಕ ಕೇಂದ್ರದ ಕ್ಷೇತ್ರ ಪರಿಶೀಲನಾ (Pre-inspection) ವರದಿಯಲ್ಲಿ ಅರ್ಹಗೊಂಡ ಅರ್ಜಿದಾರರಿಗೆ ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರು ಒಂದು ವಾರದೊಳಗೆ ಪರಿಶೀಲಿಸಿ ತಾಂತ್ರಿಕ ಮಂಜೂರಾತಿ/ ಕಾರ್ಯಾದೇಶವನ್ನು (Work Sanction Order) K-KISAN ತಂತ್ರಾಂಶದ ಮೂಲಕ ನೀಡುವುದು.
- ಕಾರ್ಯಾದೇಶವನ್ನು ನೀಡಿದ ನಂತರ, ಕೃಷಿ ಭಾಗ್ಯ ಪ್ಯಾಕೇಜ್ ಮಾದರಿ ಕುರಿತು ರೈತರಿಗೆ ಮಾಹಿತಿ ನೀಡಿ, ಅದರಂತೆ ಬದು ನಿರ್ಮಾಣ, ಕೃಷಿ ಹೊಂಡ, ಪಾಲಿಥೀನ್ ಹೊದಿಕೆ, ಡೀಸೆಲ್/ ಪೆಟ್ರೋಲ್ /ಸೋಲಾರ್ ಪಂಪ್ ಸೆಟ್, ಸೂಕ್ಷ್ಮ (ತುಂತುರು/ಹನಿ) ನೀರಾವರಿ, ಘಟಕಗಳನ್ನು ಹಾಗೂ **ಕಡ್ಡಾಯವಾಗಿ ತಂತಿ ಬೇಲಿ ಘಟಕ ಮತ್ತು ಸೂಚನಾ ಫಲಕವನ್ನು** ಚಾಲ್ತಿ ಮಾರ್ಗಸೂಚಿಯಂತೆ ಅನುಕ್ರಮವಾಗಿ ಅನುಷ್ಠಾನಗೊಳಿಸಲು ಕ್ರಮ ವಹಿಸುವುದು.
- ಸದರಿ ಘಟಕಗಳ ಅನುಷ್ಠಾನಕ್ಕೆ ತಂತ್ರಾಂಶದಲ್ಲಿ ನೀಡಿರುವ Flow Chartನ ವೇಳಾಪಟ್ಟಿಯನ್ವಯ ಕ್ಷೇತ್ರದ GPS ಫೋಟೊ ಹಾಗೂ ಅಳತೆ ಪುಸ್ತಕದಲ್ಲಿ ದಾಖಲೀಕರಣ ಮಾಡುವುದು ಹಾಗೂ K-KISAN ತಂತ್ರಾಂಶದ ಮೂಲಕ Post-inspection, ಅಳತೆ ಪುಸ್ತಕ ದಾಖಲೀಕರಣ ಹಾಗೂ DC ಬಿಲ್ ಸೃಜನೆ ಮಾಡುವುದು.
- ಎಲ್ಲಾ ಘಟಕಗಳನ್ನು ಅನುಷ್ಠಾನಗೊಳಿಸಿ ಅದಕ್ಕೆ ಸಂಬಂಧಪಟ್ಟ ಅಗತ್ಯ ದಾಖಲಾತಿಗಳನ್ನು ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರಿಗೆ ಸಲ್ಲಿಸುವುದು.
- ಸಹಾಯಕ ಕೃಷಿ ನಿರ್ದೇಶಕರು ಹಾಗೂ ಉಪ ಕೃಷಿ ನಿರ್ದೇಶಕರು, ಪ್ರತಿ ಘಟಕದ ಅನುಷ್ಠಾನದ ನಂತರ ನಿಯಮಾನುಸಾರ ಪರಿಶೀಲಿಸಿ ವೆಚ್ಚ ಭರಿಸಲು ಅಗತ್ಯ ಕ್ರಮ ವಹಿಸುವುದು.

**ಸೂಚನೆ:**

- ನೊಂದಾಯಿಸಿದ ಅರ್ಹ ಅರ್ಜಿಗಳನ್ನು ಪ್ರಸಕ್ತ ಸಾಲಿನಲ್ಲಿ ಜಿಲ್ಲಾವಾರು ನಿಗದಿಪಡಿಸಿದ ವಾರ್ಷಿಕ ಕಾರ್ಯಕ್ರಮದನ್ವಯ ಜೇಷ್ಠತೆಯನುಸಾರ K-KISAN ತಂತ್ರಾಂಶದಲ್ಲಿ ಆಯ್ಕೆ ಮಾಡಿ (Selection/ Acceptance stage), ನಂತರ ಕ್ಷೇತ್ರ ಪರಿಶೀಲನೆ (Pre-inspection) ಕೈಗೊಂಡು, ಅರ್ಹ ರೈತರಿಗೆ ಕಡ್ಡಾಯವಾಗಿ K-KISAN ತಂತ್ರಾಂಶದ ಮೂಲಕವೇ ಕಾರ್ಯಾದೇಶವನ್ನು ನೀಡುವುದು.
- ಘಟಕ ಅನುಷ್ಠಾನದ ಪ್ರತಿ ಹಂತವನ್ನು ಗಣಕೀಕರಿಸಿದ ನಂತರ ವೆಚ್ಚ ಭರಿಸುವುದು.
- ವಾರ್ಷಿಕ ಕಾರ್ಯಕ್ರಮಕ್ಕಿಂತ ಹೆಚ್ಚುವರಿಯಾಗಿ ಕೃಷಿ ಹೊಂಡಗಳ ನಿರ್ಮಾಣಕ್ಕೆ ಬೇಡಿಕೆ ಬಂದಲ್ಲಿ, ತಪ್ಪದೇ ಕೇಂದ್ರ ಕಚೇರಿಯಿಂದ ಪೂರ್ವಾನುಮತಿಯನ್ನು ಪಡೆದ ನಂತರವೇ ಅನುಷ್ಠಾನಗೊಳಿಸುವುದು.
- ಯೋಜನೆಯಡಿ ಅರ್ಜಿ ಸಲ್ಲಿಸಿದ ರೈತರು ಕೃಷಿ ಹೊಂಡ ಹಾಗೂ ತಂತಿ ಬೇಲಿ ಘಟಕದೊಂದಿಗೆ ಸೂಚನಾ ಫಲಕ ಒಳಗೊಂಡಂತೆ ಕಡ್ಡಾಯವಾಗಿ ಅನುಷ್ಠಾನ ಮಾಡುವುದು. ಸಂಬಂಧಪಟ್ಟ ಇಲಾಖಾ ಅಧಿಕಾರಿಗಳು ಯೋಜನೆಯ ಮಾರ್ಗಸೂಚಿಯನ್ವಯ ಘಟಕಗಳ ತಾಂತ್ರಿಕ ನಿರ್ದಿಷ್ಟತೆಯನ್ನು (Specifications) ಪರಿಶೀಲಿಸಿ ಹಾಗೂ ದೃಢೀಕರಿಸಿ ಎಲ್ಲಾ ಅಂಶಗಳನ್ನು ತಂತ್ರಾಂಶದಲ್ಲಿ ಅಳವಡಿಸಿದ ನಂತರ ಸಹಾಯಧನ ಬಿಡುಗಡೆ ಮಾಡುವುದು. ತಂತ್ರಾಂಶದಲ್ಲಿ ನಮೂದಿಸದೇ, ಯಾವುದೇ ಘಟಕಕ್ಕೆ ವೆಚ್ಚ ಭರಿಸಲು ಅವಕಾಶವಿರುವುದಿಲ್ಲ.

## 4. ಕೃಷಿ ಭಾಗ್ಯ ಯೋಜನೆಯಡಿ ಘಟಕಗಳ ಅನುಷ್ಠಾನದ ವಿವರಗಳು:

### 4.1. ಬದು:

ರೈತರ ಜಮೀನಿನಲ್ಲಿ ಬಿದ್ದ ಮಳೆ ನೀರನ್ನು ಪೋಲಾಗದಂತೆ ಅದೇ ಜಮೀನಿನಲ್ಲಿ ಇಂಗಿಸಲು ಹಾಗೂ ಕೃಷಿ ಹೊಂಡದಲ್ಲಿ ಸಂಗ್ರಹಿಸಲು ಅನುವಾಗುವಂತೆ ರೈತರ ಜಮೀನಿನಲ್ಲಿ ಕ್ಷೇತ್ರ ಬದು/ ಕಂದಕ ಬದು ನಿರ್ಮಾಣ ಮಾಡುವುದು ನೀಡಲಾದ ಅಂದಾಜು ಪಟ್ಟಿಯನ್ವಯ. ಕ್ಷೇತ್ರ ಬದು/ ಕಂದಕ ಬದುವನ್ನು ನಿರ್ಮಿಸುವುದು.

ಗುಡ್ಡಗಾಡು ಹಾಗೂ ಕರಾವಳಿ ಕೃಷಿ ಹವಾಮಾನ ವಲಯಗಳ (Zone 9 & 10) ವ್ಯಾಪ್ತಿಯ ತಾಲ್ಲೂಕುಗಳು ಒಳಗೊಂಡಂತೆ ಹಾಸನ, ಚಿಕ್ಕಮಗಳೂರು, ಕೊಡಗು, ಉತ್ತರ ಕನ್ನಡ, ಉಡುಪಿ, ಶಿವಮೊಗ್ಗ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಹೆಚ್ಚಿನ ಮಳೆಬೀಳುವ ಹಾಗೂ ಹೆಚ್ಚಿನ ಇಳಿಜಾರು ಹೊಂದಿರುವ ಭೂ ಪ್ರದೇಶಗಳಲ್ಲಿ ರೈತರ ಅವಶ್ಯಕತೆಯಂತೆ ಕ್ಷೇತ್ರ ಬದು / ಕಂದಕ ಬದು ಅಥವಾ ಸದರಿ ಘಟಕಕ್ಕೆ ಕೃಷಿ ಭಾಗ್ಯ ಯೋಜನೆಯಡಿ ನಿಗದಿಪಡಿಸಿದ ಸಹಾಯಧನದ ಮಿತಿಯಲ್ಲಿ ತೊಟ್ಟಿಲು ಗುಂಡಿ (Staggered Trench)/ ಬಸಿಗಾಲುವೆಯನ್ನು ನಿರ್ಮಿಸುವುದು (ಸರ್ಕಾರದ ಆದೇಶ ಸಂ. AGRI/59/ASC/2025 ದಿನಾಂಕ 28.04.2025).

**<u>ಸೂಚನೆ:</u>**

- ಬದು ಘಟಕಕ್ಕೆ ಅನುಮೋದಿತ ಅಂದಾಜು ಪತ್ರಿಕೆಯಲ್ಲಿನ ದರಗಳನ್ವಯ (ಗರಿಷ್ಠ 100 ಮೀ ಬದುವಿನ ಉದ್ದದ ಮಿತಿಯೊಂದಿಗೆ) ಸಾಮಾನ್ಯ ರೈತರಿಗೆ ಶೇ.80 ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವರ್ಗದ ರೈತರಿಗೆ ಶೇ.90 ರ ಸಹಾಯಧನ ನೀಡುವುದು.
- ಇತರೆ ಯೋಜನೆಗಳಡಿ ಅವಕಾಶವಿಲ್ಲದಿದ್ದಲ್ಲಿ ಮಾತ್ರ ಕೃಷಿ ಭಾಗ್ಯ ಯೋಜನೆಯಡಿ ರೈತರು ಬದು ನಿರ್ಮಿಸಿಕೊಳ್ಳಬಹುದಾಗಿದೆ. ಬದುವನ್ನು ಒಗ್ಗೂಡಿಸುವಿಕೆಯಡಿ (MGNREGA/WDC-2) ಅನುಷ್ಠಾನಗೊಳಿಸಲು ಅವಕಾಶವಿದ್ದಲ್ಲಿ ಅಥವಾ ಈಗಾಗಲೇ ನಿರ್ಮಿಸಿಕೊಂಡಿದ್ದಲ್ಲಿ 'ಅಸ್ತಿತ್ವದಲ್ಲಿರುವ ಘಟಕ' ಎಂದು ವಿವರಗಳನ್ನು K-KISAN ತಂತ್ರಾಂಶದಲ್ಲಿ ನಮೂದಿಸುವುದು.
- ತೊಟ್ಟಿಲು ಗುಂಡಿ (Staggered Trench)/ ಬಸಿಗಾಲುವೆಯನ್ನು ಸಂಬಂಧಿಸಿದ ಕ್ಷೇತ್ರ ಮಟ್ಟದ ಅಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿ ತಾಂತ್ರಿಕವಾಗಿ ದೃಢೀಕರಿಸುವ ಹಾಗೂ ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರಿಂದ ಅನುಮೋದಿಸಲ್ಪಟ್ಟ ರೈತರಿಗೆ ಮಾತ್ರ ಅನ್ವಯಿಸುವಂತೆ ಜಲಾನಯನ ಅಭಿವೃದ್ಧಿ ಇಲಾಖೆ ಯೋಜನೆಗಳಡಿ ಬಳಸುತ್ತಿರುವ/ ಚಾಲ್ತಿಯಲ್ಲಿರುವ ಅನುಮೋದಿತ ಅಂದಾಜು ಪತ್ರಿಕೆಗಳನ್ವಯ ನಿರ್ಮಿಸುವುದು.
- ಕೃಷಿ ಭಾಗ್ಯ ಯೋಜನೆಯಡಿ, ಬದು ನಿರ್ಮಿಸಿದ ನಂತರ, ರೈತ ಸಂಪರ್ಕ ಕೇಂದ್ರದ ಸಹಾಯಕ ಕೃಷಿ ಅಧಿಕಾರಿ/ ಕೃಷಿ ಅಧಿಕಾರಿ ಸ್ಥಳ ಪರಿಶೀಲನೆಯನ್ನು ಮಾಡಿ ಅಳತೆ ಪುಸ್ತಕದಲ್ಲಿ ನಮೂದಿಸುವುದು ಹಾಗೂ K-KISAN Mobile App ತಂತ್ರಾಂಶದಲ್ಲಿ Post Inspection ಕೈಗೊಂಡು, K-KISAN Web ತಂತ್ರಾಂಶದಲ್ಲಿ ಅಗತ್ಯ ವಿವರಗಳನ್ನು ನಮೂದಿಸುವುದು.

## 4.2. ಕೃಷಿ ಹೊಂಡ (ನೀರು ಸಂಗ್ರಹಣಾ ರಚನೆ):

ಎಲ್ಲಾ ವಿಧದ ಮಣ್ಣುಗಳಲ್ಲಿ ಮಳೆ ನೀರು ಸಂಗ್ರಹಣೆಗೆ ಕೃಷಿ ಹೊಂಡ ರಚನೆ ಅನುಕೂಲಕರವಾಗಿರುತ್ತದೆ. ಉಪಚರಿಸಲ್ಪಟ್ಟ ಕೃಷಿಯೋಗ್ಯ ಜಮೀನಿನಿಂದ ಪೋಲಾಗಿ ಹರಿಯುವ ಹೆಚ್ಚುವರಿ ಮಳೆಯ ನೀರನ್ನು ಆಯ್ದ ಸ್ಥಳದಲ್ಲಿ ಕೃಷಿ ಹೊಂಡ ತೆಗೆದು ಜಲ ಸಂಗ್ರಹಣೆಯನ್ನು ಮಾಡಬಹುದಾಗಿದೆ. ಸಂಗ್ರಹಣೆಯಾದ ಮಳೆ ನೀರನ್ನು ಬೆಳೆಗಳಿಗೆ ಸಂದಿಗ್ಧ ಹಂತಗಳಲ್ಲಿ ರಕ್ಷಣಾತ್ಮಕ ನೀರಾವರಿಗಾಗಿ ಬಳಸಿಕೊಳ್ಳಬಹುದಾಗಿದೆ. ಮಳೆ ವಿಫಲವಾದಾಗ, ಕೃಷಿ ಹೊಂಡದಲ್ಲಿ 250 ಘ.ಮೀ ನೀರು ಶೇಖರಣೆ ಆಗಿದ್ದರೆ, ಸೂಕ್ಷ್ಮ (ತುಂತುರು/ಹನಿ) ನೀರಾವರಿಯಿಂದ ಅಂದಾಜು 2-4 ಹೆ. ಪ್ರದೇಶದಲ್ಲಿ ಬೆಳೆದ ಬೆಳೆಗೆ ಒಮ್ಮೆ ರಕ್ಷಣಾತ್ಮಕ ನೀರಾವರಿಯನ್ನು ನೀಡಬಹುದಾಗಿರುತ್ತದೆ.

ಮಣ್ಣಿನ ವಿಧದ ಅನುಸಾರ ನೀರು ಸಂಗ್ರಹಣಾ ಕ್ರಮಗಳ ವಿವಿಧ ರಚನೆಗಳ ಗಾತ್ರ ಹಾಗೂ ಘಟಕ ವೆಚ್ಚದನ್ವಯ ಸಾಮಾನ್ಯ ರೈತರಿಗೆ ಶೇ.80 ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವರ್ಗದ ರೈತರಿಗೆ ಶೇ.90 ರಷ್ಟು ಸಹಾಯಧನ ನೀಡುವುದು.

ಆಳವಾದ ಕಪ್ಪು ಮಣ್ಣು ಪ್ರದೇಶದಲ್ಲಿ ಕೃಷಿ ಹೊಂಡಗಳಿಗೆ ಪಾಲಿಥೀನ್ ಹೊದಿಕೆ ಅಳವಡಿಸುವುದು ಕಡ್ಡಾಯವಿಲ್ಲದಿರುವುದರಿಂದ ಇಂತಹ ಪ್ರದೇಶದಲ್ಲಿ ರೈತರು 21*21*3 ಮೀಟರ್ ಅಳತೆ ಕೃಷಿ ಹೊಂಡ ನಿರ್ಮಿಸಲು ಆದ್ಯತೆ ನೀಡುವುದು.

ಮಣ್ಣಿನ ವಿಧದ ಅನುಸಾರ ಕ್ಷೇತ್ರ ಬದು / ಕಂದಕ ಬದು ಮತ್ತು ವಿವಿಧ ಅಳತೆಯ ಕೃಷಿ ಹೊಂಡಗಳ ನಿರ್ಮಾಣಕ್ಕೆ ನಿಗದಿಪಡಿಸಿರುವ ಸಹಾಯಧನದ ವಿವರ, ಅನುಮೋದಿತ **ಮಾದರಿ ಅಂದಾಜು ಪತ್ರಿಕೆ ಹಾಗೂ ವಿನ್ಯಾಸಗಳನ್ನು ಅನುಬಂಧ- 1** ರಲ್ಲಿ ಲಗತ್ತಿಸಿದೆ.

### ಕೃಷಿ ಹೊಂಡದ ವಿನ್ಯಾಸವು

1. ಕೃಷಿ ಹೊಂಡದ ಒಳ ಅಳತೆ ಹಾಗೂ ಕೃಷಿ ಹೊಂಡದ ಸುತ್ತಲಿನ ಬದು ನಿರ್ಮಾಣ (ಬರ್ಮ್)
2. ಹೂಳುಬೋನು (Silt trap) ಮತ್ತು ಪೈಪ್ ಇನ್‌ಲೆಟ್-ಔಟ್‌ಲೆಟ್‌ಗಳನ್ನು ಒಳಗೊಂಡಿದೆ.

### ಅನುಷ್ಠಾನ ವಿಧಾನ:

1. **ಕೃಷಿ ಹೊಂಡ ನಿರ್ಮಿಸಲು ಸ್ಥಳದ ಆಯ್ಕೆ:** ಜಮೀನಿನ ಇಳಿಜಾರಿಗೆ ಸೂಕ್ತವಾಗಿ ಕೃಷಿ ಹೊಂಡ ನಿರ್ಮಿಸಲು ಸ್ಥಳ ಆಯ್ಕೆ ಮಾಡುವುದು.
2. **ರೈತರು ಸ್ವತಃ ಕೃಷಿ ಹೊಂಡ ನಿರ್ಮಿಸಿಕೊಳ್ಳುವುದು**. ಕೃಷಿ ಹೊಂಡ ನಿರ್ಮಾಣವನ್ನು ಸಂಪೂರ್ಣವಾಗಿ ಹಾಗೂ ಅಚ್ಚುಕಟ್ಟಾಗಿ ನಿರ್ಮಾಣ ಮಾಡಿರುವ ಬಗ್ಗೆ ಸ್ಥಳೀಯ ಇಲಾಖಾ ಅಧಿಕಾರಿಗಳು ಅಳತೆ ತಪಾಸಣೆ (CMR) ದೃಢೀಕರಿಸಿ, ಸಹಾಯಧನವನ್ನು ಅನುದಾನ ಪಾವತಿ ವಿಧಾನದನ್ವಯ (ಎರಡು ಕಂತುಗಳಲ್ಲಿ) ನೇರವಾಗಿ ರೈತರ ಖಾತೆಗೆ ವರ್ಗಾಯಿಸುವುದು.
3. **ಪೈಪ್ ಇನ್‌ಲೆಟ್- ಔಟ್‌ಲೆಟ್:** ಕೃಷಿ ಹೊಂಡ ಪೈಪ್ ಇನ್‌ಲೆಟ್- ಔಟ್‌ಲೆಟ್‌ಗೆ (ನೀರಿನ ಒಳ ಹರಿವು-ಹೊರ ಹರಿವಿನ ಪೈಪ್‌ಗಳು) ಪರ್ಯಾಯ ವಿಧಗಳನ್ನು ಜಲಾನಯನ ಇಲಾಖೆಯಿಂದ ನೀಡಲಾಗಿದೆ. ಇದರಲ್ಲಿ ಈ ಕೆಳಗಿನಂತೆ ಯಾವುದಾದರೂ ಒಂದು ವಿಧವನ್ನು ರೈತರು ಅಳವಡಿಸಿಕೊಳ್ಳಬಹುದಾಗಿದೆ :
   1. ಪೈಪ್ ಇನ್‌ಲೆಟ್- ಔಟ್‌ಲೆಟ್‌ಗೆ ಸಂಬಂಧಿಸಿದಂತೆ 7.5 ಮೀ ಉದ್ದದ NP2 RCC ಪೈಪ್ ಅಳವಡಿಸುವುದು.

2. NP2 RCC ಪೈಪ್ 2.5 ಮೀ ಉದ್ದದ 3 ಪೈಪ್‌ಗಳನ್ನು (7.5ಮೀ) ಅಳವಡಿಸುವ ಬದಲಿಗೆ, ಸಿಲ್ಟ್ ಟ್ರಾಪ್ ಅನ್ನು ಬದುವಿನ ಮಧ್ಯದಲ್ಲಿ ನಿರ್ಮಿಸುವುದರಿಂದ 2.5 ಮೀ ನ ಒಂದೇ ಪೈಪ್ ಅನ್ನು ಅಳವಡಿಸಬಹುದಾಗಿರುತ್ತದೆ.

(**ಷರಾ:** PVC ಪೈಪ್‌ಗಳನ್ನು Inlet –Outlet ಗಳಿಗೆ ಬಳಸಬಹುದಾಗಿರುತ್ತದೆ (PVC ಪೈಪ್ SR ಅನುಗುಣವಾಗಿ ಬಿಲ್ ತಯಾರಿಸುವುದು). ಆದರೆ ಪೈಪ್‌ಗಳ ಮೇಲೆ ಹೆಚ್ಚು ಮಣ್ಣಿನ ಒತ್ತಡ ಹಾಕಬಾರದು. ರೈತರು ನಿರ್ವಹಣೆ ಮಾಡಬೇಕು)

ಗುಡ್ಡಗಾಡು ಹಾಗೂ ಕರಾವಳಿ ಕೃಷಿ ಹವಾಮಾನ ವಲಯಗಳ (Zone 9 & 10) ವ್ಯಾಪ್ತಿಯ ತಾಲ್ಲೂಕುಗಳು ಒಳಗೊಂಡಂತೆ ಹಾಸನ, ಚಿಕ್ಕಮಗಳೂರು, ಕೊಡಗು, ಉತ್ತರ ಕನ್ನಡ, ಉಡುಪಿ, ಶಿವಮೊಗ್ಗ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಬಸಿನೀರಿನ (Seepage) ಸಮಸ್ಯೆಯಿರುವ ಪ್ರದೇಶಗಳಲ್ಲಿ, ಸಂಬಂಧಿಸಿದ ಕ್ಷೇತ್ರ ಮಟ್ಟದ ಅಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿ ತಾಂತ್ರಿಕವಾಗಿ ದೃಢೀಕರಿಸುವ ಹಾಗೂ ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರಿಂದ ಅನುಮೋದಿಸಲ್ಪಟ್ಟ ರೈತರಿಗೆ ಮಾತ್ರ ಅನ್ವಯಿಸುವಂತೆ ನೀರಿನ ಒಳಹರಿವಿನ ಪೈಪ್‌ಗಳು (inlet pipes) ಹಾಗೂ ಹೂಳುಬೋನು (Silt trap) ಘಟಕವನ್ನು ರೈತರ ಅವಶ್ಯಕತೆಯನುಸಾರ ಅನುಷ್ಠಾನ ಮಾಡಬಹುದಾಗಿದೆ (ಸರ್ಕಾರದ ಆದೇಶ ಸಂ. AGRI/59/ASC/2025 ದಿನಾಂಕ 28.04.2025).

- ರೈತರು ಕೃಷಿ ಹೊಂಡ ಮತ್ತು Silt trap ಅನ್ನು ನಿರ್ಮಿಸಿಕೊಂಡ ಕೂಡಲೇ, ರೈತ ಸಂಪರ್ಕ ಕೇಂದ್ರದ ಸಹಾಯಕ ಕೃಷಿ ಅಧಿಕಾರಿ/ ಕೃಷಿ ಅಧಿಕಾರಿಗಳು ಅಳತೆ ಪುಸ್ತಕದಲ್ಲಿ ನಮೂದಿಸಿ ಸ್ಥಳ ಪರಿಶೀಲನೆಯನ್ನು K-KISAN Mobile App ಮೂಲಕ GPS Co-ordinates ಒಳಗೊಂಡಂತೆ Post Inspection ಕೈಗೊಂಡು K-KISAN Web ತಂತ್ರಾಂಶದಲ್ಲಿ ಅಳತೆ ಪುಸ್ತಕದ ಸಂಖ್ಯೆ,ಪುಟ ಸಂಖ್ಯೆ ಮತ್ತು ಮೊತ್ತವನ್ನು ನಮೂದಿಸುವುದು.
- 2023-24 Common S.R. ಮತ್ತು ಜಲಾನಯನ ಅಭಿವೃದ್ಧಿ ಇಲಾಖೆಯ ಅನುಮೋದಿತ ದರಸೂಚಿ–PWD 28 RDF 2024 ದಿನಾಂಕ 02.01.2025 ರ ಅನ್ವಯ ಪರಿಗಣಿಸಿ ಹೊರಡಿಸಲಾದ ಸರ್ಕಾರದ ಆದೇಶ (ಸಂ. AGRI/16/ASC/2025 ದಿನಾಂಕ 06.02.2025) ಅನುಸಾರ ಕೆಂಪು / ಕಪ್ಪು / ಜಂಬಿಟ್ಟಿಗೆ ಮಣ್ಣಿನ ವಿವಿಧ ಅಳತೆಯ ಕೃಷಿ ಹೊಂಡಗಳ ಅನುಮೋದಿತ ದರ ಈ ಕೆಳಗಿನಂತಿದೆ.

| ಕ್ರ ಸಂ | ಕೃಷಿ ಹೊಂಡದ ಅಳತೆ | ಒಟ್ಟು ಮೊತ್ತ (ರೂಗಳಲ್ಲಿ) | | | ಸಾಮಾನ್ಯ (ಶೇ. 80 ರ ಸಹಾಯಧನ) (ರೂಗಳಲ್ಲಿ) | | | ಪ.ಜಾತಿ/ ಪ. ಪಂ (ಶೇ. 90 ರ ಸಹಾಯಧನ) (ರೂಗಳಲ್ಲಿ) | | |
|---|---|---|---|---|---|---|---|---|---|---|
| | | ಕೆಂಪು ಮಣ್ಣು | ಕಪ್ಪು ಮಣ್ಣು | ಜಂಬಿಟ್ಟಿಗೆ ಮಣ್ಣು | ಕೆಂಪು ಮಣ್ಣು | ಕಪ್ಪು ಮಣ್ಣು | ಜಂಬಿಟ್ಟಿಗೆ ಮಣ್ಣು | ಕೆಂಪು ಮಣ್ಣು | ಕಪ್ಪು ಮಣ್ಣು | ಜಂಬಿಟ್ಟಿಗೆ ಮಣ್ಣು |
| 1 | 10*10*3 | 28918.72 | - | **34760.54** | 23135.0 | - | **27808.4** | 26026.8 | - | **31284.5** |
| 2 | 12*12*3 | 37940.10 | 32146.11 | **45451.01** | 30352.1 | 25716.9 | **36360.8** | 34146.1 | 28931.5 | **40905.9** |
| 3 | 15*15*3 | 59167.02 | 50869.39 | **69181.56** | 47333.6 | 40695.5 | **55345.3** | 53250.3 | 45782.5 | **62263.4** |
| 4 | 18*18*3 | 81926.92 | 71077.83 | **94397.27** | 65541.5 | 56862.3 | **75517.8** | 73734.2 | 63970.0 | **84957.5** |
| 5 | 21*21*3 | 113639.96 | 100287.23 | **128613.95** | 90912.0 | 80229.8 | **102891.2** | 102276.0 | 90258.5 | **115752.6** |

**ಸೂಚನೆ:**

1. ಆಳವಾದ ಕಪ್ಪು ಮಣ್ಣು ಪ್ರದೇಶದಲ್ಲಿ 10*10*3 ಮೀಟರ್ ಅಳತೆಯ ಕೃಷಿ ಹೊಂಡದ ಅನುಷ್ಠಾನವು ಸೂಕ್ತವಾಗಿರುವುದಿಲ್ಲ.
2. ಮಣ್ಣಿನ ವಿಧ, ಕೃಷಿ ಹೊಂಡದ ಅಳತೆ ಹಾಗೂ ಪರಿಷ್ಕೃತ ದರಪಟ್ಟಿಯನ್ವಯ ಘಟಕ ವೆಚ್ಚ ಬದಲಾವಣೆಯಾಗುವ ಸಾಧ್ಯತೆ ಇರುತ್ತದೆ.

### 4.3. ಪಾಲಿಥೀನ್ ಹೊದಿಕೆ:

ಕೃಷಿ ಹೊಂಡದಲ್ಲಿ ಸಂಗ್ರಹಣೆಯಾದ ನೀರು ಇಂಗಿ ಹೋಗದಂತೆ ತಡೆಗಟ್ಟಲು ಕೆಂಪು ಮಣ್ಣಿನಲ್ಲಿ ನಿರ್ಮಿಸಲಾದ ಕೃಷಿ ಹೊಂಡಕ್ಕೆ ಪಾಲಿಥೀನ್ ಹೊದಿಕೆ ಅಳವಡಿಸುವುದು ಕಡ್ಡಾಯವಾಗಿರುತ್ತದೆ. ಮಣ್ಣಿನ ವಿಧದ ಅನುಸಾರ ವಿವಿಧ ಅಳತೆಯ ಕೃಷಿ ಹೊಂಡಗಳಿಗೆ ಅಗತ್ಯವಿರುವ ಅನುಮೋದಿತ ಪಾಲಿಥೀನ್ ಹೊದಿಕೆ ಅಳತೆ ಹಾಗೂ ವಿನ್ಯಾಸಗಳನ್ನು **ಅನುಬಂಧ - 2** ರಲ್ಲಿ ನೀಡಿದೆ.

### 4.3.1 ಪಾಲಿಥೀನ್ ಹೊದಿಕೆ ಗೆ ವಿನಾಯಿತಿ/ ಐಚ್ಚಿಕ ಆಯ್ಕೆ:

1. ಆಳವಾದ ಕಪ್ಪು ಮಣ್ಣಿನಲ್ಲಿ ಮತ್ತು ಗುಡ್ಡಗಾಡು ಹಾಗೂ ಕರಾವಳಿ ಕೃಷಿ ಹವಾಮಾನ ವಲಯಗಳ (Zone 9 & 10) ವ್ಯಾಪ್ತಿಯ ತಾಲ್ಲೂಕುಗಳಲ್ಲಿ ಪಾಲಿಥೀನ್ ಘಟಕವು ಕಡ್ಡಾಯವಿರುವುದಿಲ್ಲ. ರೈತರ ಅವಶ್ಯಕತೆಗನುಗುಣವಾಗಿ ಒದಗಿಸಿಕೊಡುವುದು. (ಸರ್ಕಾರದ ಆದೇಶ ಸಂ. AGRI/148/ASC/2024 ದಿನಾಂಕ 05.11.2024)
2. ಹಾಗೆಯೇ ಹಾಸನ, ಚಿಕ್ಕಮಗಳೂರು ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಬಸಿನೀರಿನ (Seepage) ಸಮಸ್ಯೆಯಿರುವ ಪ್ರದೇಶಗಳಲ್ಲಿ ಸಂಬಂಧಿಸಿದ ಕ್ಷೇತ್ರ ಮಟ್ಟದ ಅಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿ ತಾಂತ್ರಿಕವಾಗಿ ದೃಢೀಕರಿಸಲಾದ ಹಾಗೂ ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರಿಂದ ಅನುಮೋದಿಸಲ್ಪಟ್ಟ ರೈತರಿಗೆ ಮಾತ್ರ ಅನ್ವಯಿಸುವಂತೆ ಪಾಲಿಥೀನ್ ಹೊದಿಕೆ ಕಡ್ಡಾಯ ಅಳವಡಿಕೆಗೆ ವಿನಾಯಿತಿ ನೀಡಿ ರೈತರ ಅವಶ್ಯಕತೆಗನುಗುಣವಾಗಿ ಅನುಷ್ಠಾನಗೊಳಿಸುವುದು (ಸರ್ಕಾರದ ಆದೇಶ ಸಂ. AGRI/59/ASC/2025 ದಿನಾಂಕ 28.04.2025)

ಪಾಲಿಥೀನ್ ಹೊದಿಕೆ ಘಟಕಕ್ಕೆ ಸಾಮಾನ್ಯ ರೈತರಿಗೆ ಶೇ.80 (ಗರಿಷ್ಠ ರೂ. 70,000 ಮಿತಿಯೊಂದಿಗೆ) ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವರ್ಗದ ರೈತರಿಗೆ ಶೇ.90 ರ (ಗರಿಷ್ಠ ರೂ. 80,000 ಮಿತಿಯೊಂದಿಗೆ) ಸಹಾಯಧನ ನೀಡುವುದು. ಯೋಜನೆಯಡಿ ಅನುಮೋದಿತ ಸಂಸ್ಥೆಗಳಿಂದ ಘಟಕ ಅನುಷ್ಠಾನ ಮಾಡಿದ ನಂತರ, ಸಂಬಂಧಪಟ್ಟ ಇಲಾಖಾ ಅಧಿಕಾರಿಗಳು K-KISAN Mobile Appನ Post Inspection ತಂತ್ರಾಂಶದಲ್ಲಿ GPS Co-ordinates ಸಹಿತ ಛಾಯಾಚಿತ್ರದೊಂದಿಗೆ, ಅಳತೆ ತಪಾಸಣೆಯನ್ನು ಕೈಗೊಂಡು ಗುಣಮಟ್ಟವನ್ನು ಪರಿಶೀಲಿಸಿ, ಸೂಕ್ತ ದಾಖಲಾತಿಗಳನ್ನು ಪಡೆದ ನಂತರ ಸಂಸ್ಥೆಗೆ ನಿಯಮಾನುಸಾರ ಮೊತ್ತ ಪಾವತಿಸುವುದು.

**ಕೃಷಿ ಹೊಂಡಕ್ಕೆ ಅಳವಡಿಸುವ ಪಾಲಿಥಿನ್ ಹೊದಿಕೆಯ ಘಟಕಗಳ ವಿವರ (Specification):**

| ಕ್ರ. ಸಂ. | ಕೃಷಿ ಹೊಂಡದ ಗಾತ್ರ (ಮೀ. ನಲ್ಲಿ) | ಪಾಲೀಥೀನ್ ಹೊದಿಕೆ ಅಳತೆ (ಚ.ಮೀ.) | | | ಅನುಮೋದಿತ ಪಾಲಿಥೀನ್ ಹೊದಿಕೆಯ Specification |
|---|---|---|---|---|---|
| | | ಕೆಂಪು ಮಣ್ಣು | ಕಪ್ಪು ಮಣ್ಣು | ಜಂಬಿಟ್ಟಿಗೆ ಮಣ್ಣು | |
| 1 | 10*10*3 | 239 | - | 279 | 250 GSM (250 Microns-Type-1) ಅಥವಾ 420 GSM (500 Microns-Type-2) Specification ಪಾಲಿಥೀನ್ ಹೊದಿಕೆ ಬಳಕೆಗೆ ಅವಕಾಶವಿರುತ್ತದೆ. |
| 2 | 12*12*3 | 305 | 317 | 350 | |
| 3 | 15*15*3 | 419 | 433 | 471 | |
| 4 | 18*18*3 | 599 | 567 | 610 | |
| 5 | 21*21*3 | 755 | 719 | 768 | |

**ವಿಶೇಷ ಸೂಚನೆ:**

1. ಕೃಷಿ ಹೊಂಡಕ್ಕೆ ಅಳವಡಿಸುವ ಪಾಲಿಥಿನ್ ಹೊದಿಕೆಯ ಘಟಕ ವೆಚ್ಚವನ್ನು ಈ ಕೆಳಗಿನ ದರಕರಾರು ಆದೇಶದಲ್ಲಿ ನೀಡಲಾಗಿದ್ದು, ಪ್ರಸಕ್ತ ಸಾಲಿನಲ್ಲಿ ಹೊಸ ದರ ಕರಾರು ಆದೇಶ ನೀಡುವವರೆಗೆ ಮಾತ್ರ ಸದರಿ ದರಗಳನ್ನೇ ಪರಿಗಣಿಸುವುದು.
2. Schedule of Rates ಪರಿಷ್ಕರಣೆಯಾದಲ್ಲಿ ಪರಿಷ್ಕೃತ ದರಗಳನ್ನು ಅನುಸರಿಸುವುದು.

- 250 GSM (250 Microns-Type-1) ಪಾಲೀಥೀನ್ ಹೊದಿಕೆ ದರ ಕರಾರು ಆದೇಶ ಸಂ: ಜಕೃನಿ (ಬೆಅ)/ಕೃಭಾ/HDPE-GM-RfP-250 GSM/ 2023-24, ದಿನಾಂಕ: 13.03.2024ರ ಕ್ಕೆ ಸಂಬಂಧಿಸಿದಂತೆ ದಿನಾಂಕ:18.11.2025 ರ ದರಗಳಿಗೆ ಕೇಂದ್ರ ಸರ್ಕಾರದ ಪರಿಷ್ಕೃತ GST ದರಗಳನ್ವಯ ನೀಡಿದ ಪಾಲಿಥೀನ್ ಹೊದಿಕೆ ಸುತ್ತೋಲೆ-4 ರಲ್ಲಿ ನಿಗಧಿಯಾಗಿರುವ ಪರಿಷ್ಕೃತ ದರ {L1: Rs. 83.29/ sqmt [Base price: Rs. 79.32 + Rs. 3.97 (GST-5 %)]}

| **250 GSM HDPE Geomembrane sheet** {**L1: Rs.83.29/ sqmt** [Base price: Rs. 79.32 + Rs. 3.97 (GST-5 %)]} | | | | | | | | |
|---|---|---|---|---|---|---|---|---|
| ಕ್ರ. ಸಂ | ಕೃಷಿ ಹೊಂಡದ ಅಳತೆ (ಮೀ.) | ಪಾಲಿಥೀನ್ ಹೊದಿಕೆ ಅಳತೆ (ಚ.ಮೀ) | 250GSMಗೆ ನಿಗದಿಪಡಿಸಿದ L1 ದರ (ರೂ. / ಚ.ಮೀ) | ಒಟ್ಟು ದರ (ರೂ.) | ಸಾಮಾನ್ಯ (ರೂ.) | | ಪ.ಜಾ/ಪ.ಪಂ (ರೂ.) | |
| | | | | | ರೈತರ ವಂತಿಕೆ | ಸರ್ಕಾರದ ಸಹಾಯ ಧನ (ಶೇ.80) | ರೈತರ ವಂತಿಕೆ | ಸರ್ಕಾರದ ಸಹಾಯಧನ (ಶೇ.90) |
| **ಕೆಂಪು ಮಣ್ಣು** | | | | | | | | |
| 1 | 10x10x3 | 239 | 83.29 | 19906.31 | 3981.26 | 15925.05 | 1990.63 | 17915.68 |
| 2 | 12x12x3 | 305 | 83.29 | 25403.45 | 5080.69 | 20322.76 | 2540.35 | 22863.11 |
| 3 | 15x15x3 | 419 | 83.29 | 34898.51 | 6979.70 | 27918.81 | 3489.85 | 31408.66 |
| 4 | 18x18x3 | 599 | 83.29 | 49890.71 | 9978.14 | 39912.57 | 4989.07 | 44901.64 |
| 5 | 21x21x3 | 755 | 83.29 | 62883.95 | 12576.79 | 50307.16 | 6288.40 | 56595.56 |

| ಕಪ್ಪು ಮಣ್ಣು | | | | | | | | |
|---|---|---|---|---|---|---|---|---|
| ಕ್ರ. ಸಂ | ಕೃಷಿ ಹೊಂಡದ ಅಳತೆ (ಮೀ.) | ಪಾಲಿಥೀನ್ ಹೊದಿಕೆ ಅಳತೆ (ಚ.ಮೀ) | 250GSMಗೆ ನಿಗದಿಪಡಿಸಿದ L1 ದರ (ರೂ. /ಚ.ಮೀ) | ಒಟ್ಟು ದರ (ರೂ.) | ಸಾಮಾನ್ಯ (ರೂ.) | | ಪ.ಜಾ/ಪ.ಪಂ (ರೂ.) | |
| | | | | | ರೈತರ ವಂತಿಕೆ | ಸರ್ಕಾರದ ಸಹಾಯಧನ (ಶೇ.80) | ರೈತರ ವಂತಿಕೆ | ಸರ್ಕಾರದ ಸಹಾಯಧನ (ಶೇ.90) |
| 1 | 10x10x3 | ಅನ್ವಯಿಸುವುದಿಲ್ಲ | | | | | | |
| 2 | 12x12x3 | 317 | 83.29 | 26402.93 | 5280.59 | 21122.34 | 2640.29 | 23762.64 |
| 3 | 15x15x3 | 433 | 83.29 | 36064.57 | 7212.91 | 28851.66 | 3606.46 | 32458.11 |
| 4 | 18x18x3 | 567 | 83.29 | 47225.43 | 9445.09 | 37780.34 | 4722.54 | 42502.89 |
| 5 | 21x21x3 | 719 | 83.29 | 59885.51 | 11977.10 | 47908.41 | 5988.55 | 53896.96 |
| ಜಂಬಿಟ್ಟಿಗೆ ಮಣ್ಣು | | | | | | | | |
| ಕ್ರ. ಸಂ | ಕೃಷಿ ಹೊಂಡದ ಅಳತೆ (ಮೀ.) | ಪಾಲಿಥೀನ್ ಹೊದಿಕೆ ಅಳತೆ (ಚ.ಮೀ) | 250GSMಗೆ ನಿಗದಿಪಡಿಸಿದ L1 ದರ (ರೂ. /ಚ.ಮೀ) | ಒಟ್ಟು ದರ (ರೂ.) | ಸಾಮಾನ್ಯ (ರೂ.) | | ಪ.ಜಾ/ಪ.ಪಂ (ರೂ.) | |
| | | | | | ರೈತರ ವಂತಿಕೆ | ಸರ್ಕಾರದ ಸಹಾಯ ಧನ (ಶೇ.80) | ರೈತರ ವಂತಿಕೆ | ಸರ್ಕಾರದ ಸಹಾಯಧನ (ಶೇ.90) |
| 1 | 10x10x3 | 279 | 83.29 | 23237.91 | 4647.58 | 18590.33 | 2323.79 | 20914.12 |
| 2 | 12x12x3 | 350 | 83.29 | 29151.50 | 5830.30 | 23321.20 | 2915.15 | 26236.35 |
| 3 | 15x15x3 | 471 | 83.29 | 39229.59 | 7845.92 | 31383.67 | 3922.96 | 35306.63 |
| 4 | 18x18x3 | 610 | 83.29 | 50806.90 | 10161.38 | 40645.52 | 5080.69 | 45726.21 |
| 5 | 21x21x3 | 768 | 83.29 | 63966.72 | 12793.34 | 51173.38 | 6396.67 | 57570.05 |

- 420 GSM (500 Microns-Type-2) ಪಾಲೀಥೀನ್ ಹೊದಿಕೆ ದರ ಕರಾರು ಆದೇಶ ಸಂ: ಜಕೃನಿ (ಬೆಅ)/ಕೃಭಾ/HDPE-GM-RfP-250 GSM/ 2023-24, ದಿನಾಂಕ: 13.03.2024ರ ಕ್ಕೆ ಸಂಬಂಧಿಸಿದಂತೆ ದಿನಾಂಕ:18.11.2025 ರ ದರಗಳಿಗೆ ಕೇಂದ್ರ ಸರ್ಕಾರದ ಪರಿಷ್ಕೃತ GST ದರಗಳನ್ವಯ ನೀಡಿದ ಪಾಲಿಥೀನ್ ಹೊದಿಕೆ ಸುತ್ತೋಲೆ-4 ರಲ್ಲಿ ನಿಗಧಿಯಾಗಿರುವ ಪರಿಷ್ಕೃತ ದರ {L1: Rs. 129.03/ sqmt [Base price: Rs. 122.88 + Rs. 6.14 (GST-5 %)]}

| **420 GSM HDPE Geomembrane sheet {L1: Rs.129.03/ sqmt** [Base price: Rs. 122.88 + Rs. 6.14 (GST-5 %)]} | | | | | | | | |
|---|---|---|---|---|---|---|---|---|
| ಕ್ರ. ಸಂ | ಕೃಷಿ ಹೊಂಡದ ಅಳತೆ (ಮೀ.) | ಪಾಲಿಥೀನ್ ಹೊದಿಕೆ ಅಳತೆ (ಚ.ಮೀ) | 420 GSMಗೆ ನಿಗದಿಪಡಿಸಿದ L1 ದರ (ರೂ. /ಚ.ಮೀ) | ಒಟ್ಟು ದರ (ರೂ.) | ಸಾಮಾನ್ಯ (ರೂ.) | | ಪ.ಜಾ/ಪ.ಪಂ (ರೂ.) | |
| | | | | | ರೈತರ ವಂತಿಕೆ | ಸರ್ಕಾರದ ಸಹಾಯ ಧನ (ಶೇ.80; ಗರಿಷ್ಠ ರೂ. 70000) | ರೈತರ ವಂತಿಕೆ | ಸರ್ಕಾರದ ಸಹಾಯಧನ (ಶೇ.90; ಗರಿಷ್ಠ ರೂ. 80000) |
| ಕೆಂಪು ಮಣ್ಣು | | | | | | | | |
| 1 | 10x10x3 | 239 | 129.03 | 30838.17 | 6167.63 | 24670.54 | 3083.82 | 27754.35 |
| 2 | 12x12x3 | 305 | 129.03 | 39354.15 | 7870.83 | 31483.32 | 3935.42 | 35418.74 |

| | | | | | | | | |
|---|---|---|---|---|---|---|---|---|
| 3 | 15x15x3 | 419 | 129.03 | 54063.57 | 10812.71 | 43250.86 | 5406.36 | 48657.21 |
| 4 | 18x18x3 | 599 | 129.03 | 77288.97 | 15457.79 | 61831.18 | 7728.90 | 69560.07 |
| 5 | 21x21x3 | 755 | 129.03 | 97417.65 | 27417.65 | 70000.00 | 17417.65 | 80000.00 |

**ಕಪ್ಪು ಮಣ್ಣು**

| ಕ್ರ. ಸಂ | ಕೃಷಿ ಹೊಂಡದ ಅಳತೆ (ಮೀ.) | ಪಾಲಿಥೀನ್ ಹೊದಿಕೆ ಅಳತೆ (ಚ.ಮೀ) | 420 GSMಗೆ ನಿಗದಿಪಡಿಸಿದ L1 ದರ (ರೂ. /ಚ.ಮೀ) | ಒಟ್ಟು ದರ (ರೂ.) | ಸಾಮಾನ್ಯ (ರೂ.) | | ಪ.ಜಾ/ಪ.ಪಂ (ರೂ.) | |
|---|---|---|---|---|---|---|---|---|
| | | | | | ರೈತರ ವಂತಿಕೆ | ಸರ್ಕಾರದ ಸಹಾಯ ಧನ (ಶೇ.80; ಗರಿಷ್ಠ ರೂ. 70000) | ರೈತರ ವಂತಿಕೆ | ಸರ್ಕಾರದ ಸಹಾಯಧನ (ಶೇ.90; ಗರಿಷ್ಠ ರೂ. 80000) |
| 1 | 10x10x3 | ಅನ್ವಯಿಸುವುದಿಲ್ಲ | | | | | | |
| 2 | 12x12x3 | 317 | 129.03 | 40902.51 | 8180.50 | 32722.01 | 4090.25 | 36812.26 |
| 3 | 15x15x3 | 433 | 129.03 | 55869.99 | 11174.00 | 44695.99 | 5587.00 | 50282.99 |
| 4 | 18x18x3 | 567 | 129.03 | 73160.01 | 14632.00 | 58528.01 | 7316.00 | 65844.01 |
| 5 | 21x21x3 | 719 | 129.03 | 92772.57 | 22772.57 | 70000.00 | 12772.57 | 80000.00 |

**ಜಂಬಿಟ್ಟಿಗೆ ಮಣ್ಣು**

| ಕ್ರ. ಸಂ | ಕೃಷಿ ಹೊಂಡದ ಅಳತೆ (ಮೀ.) | ಪಾಲಿಥೀನ್ ಹೊದಿಕೆ ಅಳತೆ (ಚ.ಮೀ) | 420 GSMಗೆ ನಿಗದಿಪಡಿಸಿದ L1 ದರ (ರೂ. /ಚ.ಮೀ) | ಒಟ್ಟು ದರ (ರೂ.) | ಸಾಮಾನ್ಯ (ರೂ.) | | ಪ.ಜಾ/ಪ.ಪಂ (ರೂ.) | |
|---|---|---|---|---|---|---|---|---|
| | | | | | ರೈತರ ವಂತಿಕೆ | ಸರ್ಕಾರದ ಸಹಾಯ ಧನ (ಶೇ.80; ಗರಿಷ್ಠ ರೂ. 70000) | ರೈತರ ವಂತಿಕೆ | ಸರ್ಕಾರದ ಸಹಾಯಧನ (ಶೇ.90; ಗರಿಷ್ಠ ರೂ. 80000) |
| 1 | 10x10x3 | 279 | 129.03 | 35999.37 | 7199.87 | 28799.50 | 3599.94 | 32399.43 |
| 2 | 12x12x3 | 350 | 129.03 | 45160.50 | 9032.10 | 36128.40 | 4516.05 | 40644.45 |
| 3 | 15x15x3 | 471 | 129.03 | 60773.13 | 12154.63 | 48618.50 | 6077.31 | 54695.82 |
| 4 | 18x18x3 | 610 | 129.03 | 78708.30 | 15741.66 | 62966.64 | 7870.83 | 70837.47 |
| 5 | 21x21x3 | 768 | 129.03 | 99095.04 | 29095.04 | 70000.00 | 19095.04 | 80000.00 |

**ಪಾಲಿಥೀನ್ ಹೊದಿಕೆ ಅಳವಡಿಕೆ ಕುರಿತು ಈ ಕೆಳಕಂಡ ಅಂಶಗಳನ್ನು ಪಾಲಿಸುವುದು:**

- ಎಲ್ಲಾ ಅಳತೆಯ ಕೃಷಿ ಹೊಂಡಗಳಿಗೆ ರೈತರ ಆಯ್ಕೆಯನುಸಾರ 250 GSM (250 Microns-Type-1) ಅಥವಾ 420 GSM (500 Microns-Type-2) Specification ಪಾಲಿಥೀನ್ ಹೊದಿಕೆ (HSN Code: 5911 10 00) ಬಳಕೆಗೆ ಅವಕಾಶವಿರುತ್ತದೆ (ಸರ್ಕಾರದ ಆದೇಶ ಸಂ. AGRI/16/ASC/2024 ದಿ: 05.08.2024)
- ಪಾಲಿಥೀನ್ ಹೊದಿಕೆ ಅನುಮೋದಿತ ಎಲ್ಲಾ ಸಂಸ್ಥೆಗಳು ಎಲ್ಲಾ ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತವೆ.
- ರೈತ ಸಂಪರ್ಕ ಕೇಂದ್ರದ ಕೃಷಿ ಅಧಿಕಾರಿ/ ಸಹಾಯಕ ಕೃಷಿ ಅಧಿಕಾರಿ ಹಾಗೂ ಸಂಸ್ಥೆಯ ಪ್ರತಿನಿಧಿಗಳು ಸಮಾಲೋಚಿಸಿ, ಜಂಟಿ ಸಮೀಕ್ಷೆ ಕೈಗೊಂಡು ತಾಂತ್ರಿಕತೆಯನುಸಾರ ನಿರ್ಮಿಸಿರುವುದರ ಬಗ್ಗೆ ಖಾತರಿಪಡಿಸಿಕೊಂಡು (Slope, Smoothening, Anchor Trench

Formation, Inlet-Outlet) ಹಾಗು ತಾಂತ್ರಿಕವಾಗಿ ಸರಿ ಇರದ/ ಪೂರ್ಣಗೊಳ್ಳದ ಕೃಷಿ ಹೊಂಡಗಳನ್ನು ಸ್ಥಳದಲ್ಲಿಯೇ ಸರಿಪಡಿಸಲು ಕ್ರಮ ವಹಿಸುವುದು.

- ಕ್ಷೇತ್ರ ಪರಿಶೀಲನೆಯಲ್ಲಿ ತಾಂತ್ರಿಕವಾಗಿ ಪೂರ್ಣಗೊಂಡಿರುವ ಕೃಷಿ ಹೊಂಡಗಳ ಪಟ್ಟಿ ಹಾಗೂ ರೈತರ ವಂತಿಕೆ ಪಾವತಿಸಿರುವ ಪಟ್ಟಿಯನ್ನು ಸಹಾಯಕ ಕೃಷಿ ನಿರ್ದೇಶಕರು **ನಮೂನೆ-2A** ರಲ್ಲಿ ಕೂಡಲೇ ಸಂಸ್ಥೆಗಳಿಗೆ ನೀಡುವುದು.
- ಸಂಸ್ಥೆಯಿಂದ ಪಾಲಿಥೀನ್ ಹೊದಿಕೆಯನ್ನು ಅಳವಡಿಸಿದ ಕೂಡಲೇ, ರೈತ ಸಂಪರ್ಕ ಕೇಂದ್ರದ ಸಹಾಯಕ ಕೃಷಿ ಅಧಿಕಾರಿ/ ಕೃಷಿ ಅಧಿಕಾರಿಗಳು ಸ್ಥಳ ಪರಿಶೀಲನೆಯನ್ನು K-KISAN Mobile Appನ Post Inspection ತಂತ್ರಾಂಶದಲ್ಲಿ ನಡೆಸಿ, Secondary QR Code (Alias Number) ಸಂಖ್ಯೆಯನ್ನು K-KISAN Mobile ತಂತ್ರಾಂಶದಲ್ಲಿ ನಮೂದಿಸುವುದು.

**ವಿಶೇಷ ಸೂಚನೆ:**

ರೈತ ಸಂಪರ್ಕ ಕೇಂದ್ರಗಳಲ್ಲಿ ಪಾಲಿಥೀನ್ ಹೊದಿಕೆಗಳನ್ನು ದಾಸ್ತಾನು ಮಾಡುವಂತಿಲ್ಲ, ಸಂಬಂಧಿಸಿದ ಸಂಸ್ಥೆಯು ಪಾಲಿಥೀನ್ ಹೊದಿಕೆಗಳನ್ನು ನೇರವಾಗಿ ಫಲಾನುಭವಿ ಕ್ಷೇತದ ಕೃಷಿ ಹೊಂಡಗಳಿಗೆ ಅಳವಡಿಸಿ, ರೈತರಿಂದ ನಿಗದಿತ ನಮೂನೆಯಲ್ಲಿ ಸಹಿ ಪಡೆದು ಕೇ-ಕಿಸಾನ್ ತಂತ್ರಾಂಶದಲ್ಲಿ ದಾಖಲಿಸುವುದು.

**ನಮೂನೆ-2A** ದಿನಾಂಕ:

| ಕ್ರ. ಸಂ. | ರೈತರ ಹೆಸರು | ತಾಲ್ಲೂಕು | ಹೋಬಳಿ | ಗ್ರಾಮ | ಪೂರ್ಣಗೊಂಡಿರುವ ಕೃಷಿ ಹೊಂಡದ ಅಳತೆ | ಸರಬರಾಜು ಸಂಸ್ಥೆ | ರೈತರ ವಂತಿಕೆ | RTGS ವಿವರ (UTR ಸಂಖ್ಯೆ /ದಿನಾಂಕ) |
|---|---|---|---|---|---|---|---|---|
| | | | | | | | | |
| | | | | | | | | |

ಸಹಿ/-
ಸಹಾಯಕ ಕೃಷಿ ನಿರ್ದೇಶಕರು

- ಸಂಸ್ಥೆಗಳು, ಕೃಷಿ ಹೊಂಡಗಳಿಗೆ ಪಾಲಿಥೀನ್ ಹೊದಿಕೆಯನ್ನು 5 ಕಾರ್ಯ ನಿರ್ವಹಿಸುವ ದಿವಸಗಳೊಳಗಾಗಿ ಪೂರ್ಣಗೊಳಿಸಿ **ನಮೂನೆ-2B** ರಲ್ಲಿ ಸಹಾಯಕ ಕೃಷಿ ನಿರ್ದೇಶಕರಿಗೆ ರೈತರ ದೃಢೀಕರಣ, ಸಾಲದ ಬಿಲ್ಲು (Credit Bill) / Installation Certificate/ ವಾರಂಟಿಯೊಂದಿಗೆ ಸಲ್ಲಿಸುವುದು.

**ನಮೂನೆ-2B** ದಿನಾಂಕ:

| ಕ್ರ. ಸಂ. | ಪಾಲಿಥೀನ್ ಹೊದಿಕೆ ಪೂರ್ಣಗೊಂಡಿರುವ ರೈತರ ಹೆಸರು | ತಾಲ್ಲೂಕು | ಹೋಬಳಿ | ಗ್ರಾಮ | ಸಾಲದ ಬಿಲ್ಲಿನ ಸಂಖ್ಯೆ | ವಾರಂಟಿ/ Installation Certificate | ರೈತರ ದೃಢೀಕರಣ ಪ್ರತಿ |
|---|---|---|---|---|---|---|---|
| | | | | | | | |
| | | | | | | | |

ಸಹಿ/-
ಸಂಸ್ಥೆ ಪ್ರತಿನಿಧಿ

- ಸಹಾಯಕ ಕೃಷಿ ನಿರ್ದೇಶಕರು ವರದಿಯನ್ನು ಪಡೆದು ದೃಡೀಕರಿಸಿ 3 ಕಾರ್ಯ ನಿರ್ವಹಿಸುವ ದಿನಗಳೊಳಗಾಗಿ ಸಾಲದ ಬಿಲ್ಲುಗಳನ್ನು ತಯಾರಿಸಿ, ಡಿ.ಸಿ. ಬಿಲ್ಲುಗಳನ್ನು K-KISAN ತಂತ್ರಾಂಶದಲ್ಲಿ ತಯಾರಿಸಿ ಮೇಲು ಸಹಿಗೆ ಉಪ ಕೃಷಿ ನಿರ್ದೇಶಕರಿಗೆ **ನಮೂನೆ-2C** ರಲ್ಲಿ ಸಲ್ಲಿಸುವುದು.

**ನಮೂನೆ-2C** ದಿನಾಂಕ:

| ಕ್ರ. ಸಂ. | ಪಾಲಿಥೀನ್ ಹೊದಿಕೆ ಪೂರ್ಣಗೊಂಡಿರುವ ರೈತರ ಹೆಸರು | ತಾಲ್ಲೂಕು | ಹೋಬಳಿ | ಗ್ರಾಮ | ಸಾಲದ ಬಿಲ್ಲಿನ ವಿವರ ಹಾಗೂ ಸಂಖ್ಯೆ | ವಾರಂಟಿ/ Installation Certificate | ರೈತರ ದೃಢೀಕರಣ ಪ್ರತಿ |
|---|---|---|---|---|---|---|---|
| | | | | | | | |
| | | | | | | | |

ಸಹಿ/-
ಸಹಾಯಕ ಕೃಷಿ ನಿರ್ದೇಶಕರು

- ಉಪ ಕೃಷಿ ನಿರ್ದೇಶಕರು ಬಿಲ್ಲುಗಳನ್ನು ಸ್ವೀಕರಿಸಿದ 2 ದಿವಸಗಳೊಳಗಾಗಿ ಪರಿಶೀಲಿಸಿ K-KISAN ತಂತ್ರಾಂಶದಲ್ಲಿ ಡಿ.ಸಿ. ಬಿಲ್ಲು ಮೇಲು ಸಹಿ ಮಾಡಿ ಸಹಾಯಕ ಕೃಷಿ ನಿರ್ದೇಶಕರಿಗೆ ರವಾನಿಸುವುದು.

## ಅನುಬಂಧ-2

## ಪಾಲಿಥೀನ್ ಹೊದಿಕೆ - ಒಪ್ಪಿಗೆ ಪತ್ರ ಮತ್ತು ಹಣ ಸಂದಾಯ ರಸೀದಿ

-------ತಾಲ್ಲೂಕು, ------ ಹೋಬಳಿ, ................................................ ಗ್ರಾಮದ ಶ್ರೀ/ಶ್ರೀಮತಿ ನಾನು FID/ಆಧಾರ್ ಸಂಖ್ಯೆ................... ..............................................................., ಕಾರ್ಯಾದೇಶ ಸಂಖ್ಯೆ.......................... ಕೃಷಿ ಭಾಗ್ಯ ಯೋಜನೆಯಡಿಯಲ್ಲಿ ___________ ಅಳತೆಯ ಕೃಷಿ ಹೊಂಡಕ್ಕೆ ________ **micron/GSM ಪಾಲಿಥೀನ್ ಹೊದಿಕೆ**ಯನ್ನು ಅಳವಡಿಸಿಕೊಂಡಿದ್ದು, ಸರ್ಕಾರದ ಸಹಾಯಧನ ರೂ.________ಗಳನ್ನು (ಅಕ್ಷರಗಳಲ್ಲಿ_____________) _____________________, ಸಂಸ್ಥೆಯವರಿಗೆ ನೇರವಾಗಿ ವರ್ಗಾವಣೆ ಮಾಡಲು ಒಪ್ಪಿರುತ್ತೇನೆ. HDPE ಪಾಲಿಥೀನ್ ಹೊದಿಕೆ, Invoice No,___________ , ದಿನಾಂಕ___________

ಸ್ಥಳ :
ದಿನಾಂಕ ರೈತರ ಸಹಿ

## ಪಾಲಿಥೀನ್ ಹೊದಿಕೆ ತೃಪ್ತಿಕರ ಪ್ರಮಾಣ ಪತ್ರ

----- ತಾಲ್ಲೂಕು ------ ಹೋಬಳಿ,_________________ಗ್ರಾಮದ ಶ್ರೀ/ ಶ್ರೀಮತಿ ______________________________ಆದ ನಾನು FID/ಆಧಾರ್ ಸಂಖ್ಯೆ.................... ............................................................, ಕಾರ್ಯಾದೇಶ ಸಂಖ್ಯೆ......................... ಕೃಷಿ ಭಾಗ್ಯ ಯೋಜನೆಯಡಿಯಲ್ಲಿ ____________ಅಳತೆಯ ಕೃಷಿ ಹೊಂಡ ನಿರ್ಮಿಸಿದ್ದು, ----------------------------- ಸಂಸ್ಥೆಯವರು ________ micron/GSM ಪಾಲಿಥೀನ್ ಹೊದಿಕೆಯನ್ನು ಅಳವಡಿಸಿರುತ್ತಾರೆ. ಸದರಿ ಪಾಲಿಥೀನ್ ಅಳವಡಿಕೆಯು ತೃಪ್ತಿಕರವಾಗಿರುತ್ತದೆಂದು ದೃಢೀಕರಿಸಿರುತ್ತೇನೆ.

ಸ್ಥಳ: ರೈತರ ಸಹಿ

ದಿನಾಂಕ:

| | | |
|---|---|---|
| ಸಹಾಯಕ ಕೃಷಿ ಅಧಿಕಾರಿ<br>ರೈತ ಸಂಪರ್ಕ ಕೇಂದ್ರ<br>----- ಹೋಬಳಿ | ಕೃಷಿ ಅಧಿಕಾರಿ<br>ರೈತ ಸಂಪರ್ಕ ಕೇಂದ್ರ<br>------- ಹೋಬಳಿ | ಸಹಾಯಕ ಕೃಷಿ ನಿರ್ದೇಶಕರು<br>------- ತಾಲ್ಲೂಕು |

### 4.3.2 ಪಾಲಿಥೀನ್ ಹೊದಿಕೆಯ ಗುಣ ನಿಯಂತ್ರಣ

ಕೃಷಿ ಭಾಗ್ಯ ಯೋಜನೆಯಡಿ ನಿರ್ಮಿಸಲಾಗಿರುವ ಕೃಷಿ ಹೊಂಡಗಳಿಗೆ ಬಳಸುತ್ತಿರುವ ಪಾಲಿಥೀನ್ ಹೊದಿಕೆ 250 micron (250 GSM)/500 micron (420 GSM) HDPE Geo membrane Sheet ಗಳ ಗುಣಮಟ್ಟವನ್ನು ಖಾತರಿಪಡಿಸಿಕೊಳ್ಳಲು ಈ ಕೆಳಗೆ ನೀಡಿದ ವಿಧಾನವನ್ನು ಅನುಸರಿಸಿ ಪ್ರತಿ ಜಿಲ್ಲೆಯಿಂದ ಸರಬರಾಜು ಸಂಸ್ಥೆವಾರು ಪಾಲಿಥೀನ್ ಹೊದಿಕೆಯ ಮಾದರಿಯನ್ನು ತೆಗೆದು CIPET(BIS recognized) ಪ್ರಯೋಗಾಲಯಕ್ಕೆ ವಿಶ್ಲೇಷಣೆಗೆ ಕಳುಹಿಸುವುದು. ವಿಶ್ಲೇಷಣಾ ಶುಲ್ಕವನ್ನು ಆಡಳಿತಾತ್ಮಕ ವೆಚ್ಚ (059)ದಡಿ ಭರಿಸಿ ಕೇಂದ್ರ ಕಚೇರಿಗೆ ಮಾಹಿತಿ ಸಲ್ಲಿಸುವುದು.

**ವಿಶೇಷ ಸೂಚನೆ:**

- ಪ್ರತಿ ಜಿಲ್ಲೆಯಲ್ಲಿ ಕನಿಷ್ಠ ಒಂದು ಪಾಲಿಥೀನ್ ಹೊದಿಕೆ (250 GSM ಅಥವಾ 420 GSM) HDPE Geo membrane ಗುಣ ನಿಯಂತ್ರಣ ಮಾದರಿ ತೆಗೆಯುವುದು ಕಡ್ಡಾಯವಾಗಿರುತ್ತದೆ.
- ಗುಣ ನಿಯಂತ್ರಣ ಮಾದರಿಯನ್ನು **ಫಲಾನುಭವಿ ಕ್ಷೇತ್ರದಲ್ಲಿಯೇ** ತೆಗೆಯುವುದು ಕಡ್ಡಾಯ ಹಾಗೂ **ಸಂಸ್ಥೆಯ ಪ್ರತಿನಿಧಿ, ಫಲಾನುಭವಿ ರೈತ** ಹಾಗೂ 3 ರಿಂದ 4 ರೈತರ ಸಮಕ್ಷಮದಲ್ಲಿ ನಿಯಮಾನುಸಾರ ಮಾದರಿಗಳನ್ನು ತೆಗೆದು ವಿಶ್ಲೇಷಣೆಗೆ ಕಳುಹಿಸುವುದು.
- ಜಿಲ್ಲಾವಾರು ಮಾದರಿ ಸಂಗ್ರಹಣೆ ಪ್ರಗತಿ ವರದಿ ಹಾಗೂ ವಿಶ್ಲೇಷಣಾ ವರದಿಯನ್ನು ಕೇಂದ್ರ ಕಚೇರಿಗೆ ಸಲ್ಲಿಸುವುದು.

**ಪಾಲಿಥೀನ್ ಹೊದಿಕೆಯ ಗುಣ ನಿಯಂತ್ರಣ ಮಾದರಿ ತೆಗೆಯುವ ವಿಧಾನ:**

- ಫಲಾನುಭವಿಗೆ ಒದಗಿಸಿದ ಪಾಲಿಥೀನ್ ಹೊದಿಕೆಯ ಮಾದರಿ ಸಂಗ್ರಹಿಸುವ ಮುನ್ನ ಸಂಬಂಧಿತ ಉತ್ಪಾದಕ/ಸರಬರಾಜು ಸಂಸ್ಥೆಯು ಚಾಲ್ತಿ ದರಕರಾರು ಆದೇಶದನ್ವಯ

ಅನುಮೋದಿತ ಸಂಸ್ಥೆಯೆಂಬುದನ್ನು, ಅನುಮೋದಿತ BIS Standard ಹೊಂದಿರುವುದನ್ನು, ಸದರಿ ಸಾಲಿನಲ್ಲಿ ಅದೇ ಸಂಸ್ಥೆ ಹಾಗೂ ಬ್ಯಾಚ್/ಲಾಟ್ ನ ಮಾದರಿ ಈಗಾಗಲೇ ತೆಗೆದಿರುವುದಿಲ್ಲವೆಂಬುದನ್ನು ಖಾತರಿಪಡಿಸಿಕೊಳ್ಳುವುದು.

- ಫಲಾನುಭವಿಗೆ ಸರಬರಾಜು ಮಾಡಿದ ಪಾಲಿಥೀನ್ ಹೊದಿಕೆಯನ್ನು ಕೃಷಿ ಹೊಂಡಕ್ಕೆ ಅಳವಡಿಸುವ ಮುಂಚಿತವಾಗಿ ಉತ್ಪಾದಕ ಸಂಸ್ಥೆಯ (Manufacturer) ವಿವರ, ಬ್ಯಾಚ್ ಸಂಖ್ಯೆ, ISI mark-BIS Standard Reference Number ಮುದ್ರಿಸಿರುವ, Tag/label ಇರುವಂತೆ ಹಾಗೂ Seam Joint ಇರುವಂತೆ ಕತ್ತರಿಸಿದ 01 X 08 ಮೀ. ಅಳತೆಯ ಒಂದು ಮಾದರಿಯನ್ನು ತೆಗೆಯುವುದು.
- ಪಾಲಿಥೀನ್ ಹೊದಿಕೆಯ ಒಟ್ಟು ಅಳತೆ, ವಿಧ (Type-1 / Type-2), GSM (250 GSM /420 GSM), BIS Standard Reference Number, ಬ್ಯಾಚ್ ಸಂಖ್ಯೆ, ಉತ್ಪಾದಕ ಸಂಸ್ಥೆಯ ವಿವರ, ಸರಬರಾಜು ಸಂಸ್ಥೆಯ ವಿವರ, ಹೊದಿಕೆಯ ಸರಬರಾಜು ಮಾಡಿದ ದಿನಾಂಕ, ಮಾದರಿ ಸಂಗ್ರಹಿಸಿದ ಅಧಿಕಾರಿಯ ವಿವರ, ಮಾದರಿಯ ಕೋಡ್ ಸಂಖ್ಯೆ, ಸಂಗ್ರಹಿಸಿದ ದಿನಾಂಕ, ಫಲಾನುಭವಿಯ ವಿವರ ಒಳಗೊಂಡಂತೆ ಅಗತ್ಯ ಮಾಹಿತಿಯನ್ನು ಹಾಗೂ ಮಾದರಿಯನ್ನು ವಿಶ್ಲೇಷಣೆ ಮಾಡಲು ಕೋರಿಕೆ ಪತ್ರವನ್ನು ಮಾದರಿಯೊಂದಿಗೆ ಲಗತ್ತಿಸಿ CIPET ಪ್ರಯೋಗಾಲಯಕ್ಕೆ ಸಲ್ಲಿಸುವುದು.
- ವಿಶ್ಲೇಷಣಾ ವರದಿಯನ್ನು ಪಡೆದು ಪ್ರತಿಯನ್ನು ಕೇಂದ್ರ ಕಛೇರಿಗೆ ಸಲ್ಲಿಸುವುದು.
- ವಿಶ್ಲೇಷಣಾ ವರದಿಯನುಸಾರ ಮಾದರಿಯು ಕಳಪೆಯೆಂದು (Substandard) ಕಂಡುಬಂದಲ್ಲಿ ಅಂತಹ ಪ್ರಕರಣಗಳ ವಿವರಗಳನ್ನು ಕೂಡಲೇ ಕೇಂದ್ರ ಕಚೇರಿಗೆ ಸಲ್ಲಿಸುವುದು.
- ಪಾಲಿಥೀನ್ ಹೊದಿಕೆಯ ಮಾದರಿ ಸಂಗ್ರಹಿಸಿದ ಫಲಾನುಭವಿಗೆ ಅನುಮೋದಿತ ಸಂಸ್ಥೆಯಿಂದ ಅದೇ GSM/Type ಹಾಗೂ ಅಳತೆಯ ಹೊಸ ಪಾಲಿಥೀನ್ ಹೊದಿಕೆಯನ್ನು ಒದಗಿಸುವುದು.

ಜಿಲ್ಲಾವಾರು ತೆಗೆಯಬೇಕಾದ ಪಾಲಿಥೀನ್ ಹೊದಿಕೆಯ ಗುಣ ನಿಯಂತ್ರಣ ಕನಿಷ್ಠ ಮಾದರಿಗಳ ಗುರಿ ವಿವರವನ್ನು **ಅನುಬಂಧ-3** ರಲ್ಲಿ ನೀಡಿದೆ.

## 4.4 ಕೃಷಿ ಹೊಂಡದ ಸುತ್ತಲೂ ತಂತಿ ಬೇಲಿ (GI Wire Fencing) ಮತ್ತು ಸೂಚನಾ ಫಲಕ:

ಆಕಸ್ಮಿಕ ಅವಘಡಗಳನ್ನು ತಪ್ಪಿಸಲು ಕೃಷಿ ಹೊಂಡದ ಸುತ್ತಲೂ ತಂತಿ ಬೇಲಿ ಅಳವಡಿಸುವುದು. K-KISAN ತಂತ್ರಾಂಶದಲ್ಲಿ ರೈತರ ನೋಂದಣಿ ಮಾಡುವಾಗ **ಅನುಬಂಧ-3A** ನಲ್ಲಿ ರೈತರಿಂದ ಭೌತಿಕವಾಗಿ ದೃಢೀಕರಣ ಪಡೆದಿರುವ ಕುರಿತು ತಂತ್ರಾಂಶದಲ್ಲಿ ಕಡ್ಡಾಯವಾಗಿ ನಮೂದಿಸುವುದು.

ಕೃಷಿ ಭಾಗ್ಯ ಯೋಜನೆಯಡಿಯಲ್ಲಿ ಕೃಷಿ ಹೊಂಡದ ಸುತ್ತಲೂ ತಂತಿ ಬೇಲಿ ಅಳವಡಿಸಲು, ಅನುಮೋದಿತ ಅಂದಾಜು ಪತ್ರಿಕೆ ಹಾಗೂ ಘಟಕ ವೆಚ್ಚವನ್ನು ಲಗತ್ತಿಸಿದ್ದು ಅದರನ್ವಯ ಒಟ್ಟು ಘಟಕ ವೆಚ್ಚದ ಶೇ 40 ರ ಸಹಾಯಧನವನ್ನು ಸಾಮಾನ್ಯ ಮತ್ತು ಶೇ 50 ರ ಸಹಾಯಧನವನ್ನು ಪ.ಜಾ/ಪ.ಪಂ ರೈತರಿಗೆ ಪಾವತಿಸುವುದು. ವಿವಿಧ ಅಳತೆಯ ಕೃಷಿ ಹೊಂಡಗಳ ಸುತ್ತಲೂ ತಂತಿ ಬೇಲಿ ಅಳವಡಿಸಲು ಅನುಮೋದಿತ **ಮಾದರಿ ಅಂದಾಜು ಪತ್ರಿಕೆಗಳನ್ನು ಹಾಗೂ ವಿನ್ಯಾಸವನ್ನು ಅನುಬಂಧ- 4** ರಲ್ಲಿ ಲಗತ್ತಿಸಿದೆ.

ಸುರಕ್ಷತಾ ಕ್ರಮವಾಗಿ ಕೃಷಿ ಹೊಂಡಗಳಲ್ಲಿ ಹಗ್ಗಗಳನ್ನು ಇಳಿಬಿಟ್ಟು ಟ್ಯೂಬ್‌ಗಳನ್ನು ತೇಲಿಬಿಡುವುದು ಹಾಗೂ **ನಮೂನೆ-3** ರನ್ವಯ ಸೂಚನಾ ಫಲಕವನ್ನು ಕಡ್ಡಾಯವಾಗಿ ಅಳವಡಿಸುವುದು.

**ಸೂಚನೆ:** ತಂತಿ ಬೇಲಿಯಲ್ಲಿನ ಕಬ್ಬಿಣದ ಕಂಬಗಳ ಸಂಖ್ಯೆಗೆ ಅನುಗುಣವಾಗಿ ಕಲ್ಲಿನ/ ಸಿಮೆಂಟ್ ಕಂಬಗಳನ್ನು ಬಳಸಲು ಅವಕಾಶ ಕಲ್ಪಿಸಿದ್ದು, ತಂತಿ ಬೇಲಿ ಘಟಕದ ಅನುಮೋದಿತ ಅಂದಾಜು ಪತ್ರಿಕೆಯಲ್ಲಿ ನಿಗದಿಪಡಿಸಲಾದ ಆರ್ಥಿಕ ವೆಚ್ಚಕ್ಕೆ ಸೀಮಿತಗೊಳಿಸಿ ಅನುಷ್ಠಾನಗೊಳಿಸುವುದು.

ಸೂಚನಾ ಫಲಕಗಳನ್ನು ಧೀರ್ಘಾವಧಿಯಲ್ಲಿ ಬಾಳಿಕೆ ಬರುವ ಕಬ್ಬಿಣದ ಶೀಟ್‌ಗಳನ್ನು ಉಪಯೋಗಿಸಿ ಸಿದ್ಧಪಡಿಸುವುದು. **ಬ್ಯಾನರ್ ಮಾದರಿಯ ಸೂಚನಾ ಫಲಕಗಳಿಗೆ ಅವಕಾಶವಿರುವುದಿಲ್ಲ.**

**ನಮೂನೆ-3**

**ವರ್ಷ:__________ ಕೃಷಿ ಇಲಾಖೆ ಯೋಜನೆ: __________**

**ಕೃಷಿ ಹೊಂಡದ ಸೂಚನಾ ಫಲಕ**










1. **"ಅಪಾಯವಿದೆ ಎಚ್ಚರಿಕೆ"**
2. **ಕೃಷಿ ಹೊಂಡಕ್ಕೆ ಭೂಮಾಲೀಕರನ್ನು ಹೊರತುಪಡಿಸಿ, ಮಕ್ಕಳು, ವೃದ್ಧರು ಹಾಗೂ ಇತರರಿಗೆ ಪ್ರವೇಶವಿರುವುದಿಲ್ಲ.**
3. **ಕೃಷಿ ಹೊಂಡದ ಪಾಲಿಥೀನ್ ಹೊದಿಕೆಯಿಂದಾಗಿ ಜಾರುವ ಸಂಭವವಿದ್ದು, ಕೃಷಿ ಹೊಂಡದಲ್ಲಿ ಈಜಾಡುವುದು/ ಜಾನುವಾರುಗಳಿಗೆ ನೀರು ಕುಡಿಸುವುದು/ ಬಟ್ಟೆ- ಪಾತ್ರೆ ತೊಳೆಯುವುದು ಹಾಗೂ ಇತರೆ ಕೃಷಿಯೇತರ ಚಟುವಟಿಕೆಗಳನ್ನು ನಿಷೇಧಿಸಿದೆ.**

**ರೈತನ ಹೆಸರು:__________ ಗ್ರಾಮ:__________ ಕೃಷಿ ಹೊಂಡದ ಅಳತೆ:__________ಮೀ.**

ರೈತರು ಕೃಷಿ ಹೊಂಡದ ಸುತ್ತಲೂ ತಂತಿ ಬೇಲಿ ಘಟಕ ಹಾಗೂ ಸೂಚನಾ ಫಲಕವನ್ನು ಅಳವಡಿಸಿಕೊಂಡ ಕೂಡಲೇ, ರೈತ ಸಂಪರ್ಕ ಕೇಂದ್ರದ ಸಹಾಯಕ ಕೃಷಿ ಅಧಿಕಾರಿ/ಕೃಷಿ ಅಧಿಕಾರಿಗಳು ರೈತರ ಕ್ಷೇತ್ರಕ್ಕೆ ಭೇಟಿ ನೀಡಿ, ಅನುಷ್ಠಾನವಾಗಿರುವ ಬಗ್ಗೆ ಪರಿಶೀಲಿಸಿ, ಪೂರ್ಣಗೊಳಿಸಿರುವ ಬಗ್ಗೆ ಖಚಿತಪಡಿಸಿ ಅಳತೆ ಪುಸ್ತಕದಲ್ಲಿ ನಮೂದಿಸಿ ಸ್ಥಳ ಪರಿಶೀಲನೆಯನ್ನು K-KISAN Mobile Appನ Post Inspection ತಂತ್ರಾಂಶದಲ್ಲಿ ಮಾಡುವುದು. K-KISAN web ತಂತ್ರಾಂಶದಲ್ಲಿ photo ದಾಖಲೀಕರಣ/ ಅಳತೆ ಪುಸ್ತಕದ ಸಂಖ್ಯೆ/ಪುಟ ಸಂಖ್ಯೆಯನ್ನು ನಮೂದಿಸುವುದು.

ಅಳತೆ ಪುಸ್ತಕದಲ್ಲಿ ದಾಖಲಿಸಿದ ಅಳತೆಗನುಗುಣವಾಗಿ ನಿರ್ದಿಷ್ಟ ಸಹಾಯಧನವನ್ನು ರೈತರಿಗೆ ಪಾವತಿಸುವುದು ಹಾಗೂ **ಅನುಬಂಧ-3B** ರಲ್ಲಿ ರೈತರಿಂದ ಸಹಾಯಧನ ಸ್ವೀಕೃತಿ ಕುರಿತು ದೃಢೀಕರಣ ಪಡೆಯುವುದು.

**ಸೂಚನಾ ಫಲಕ ವೆಚ್ಚ ಭರಿಸಿವುದು:**

ರೈತರು ಸ್ವಂತ ವೆಚ್ಚದಲ್ಲಿ ಸೂಚನಾಫಲಕ ಅಳವಡಿಸಿಕೊಳ್ಳುವುದು, ನಂತರ ಸ್ಥಳ ಪರಿಶೀಲನೆ ಮಾಡಿ ಇದರ ವೆಚ್ಚ ಗರಿಷ್ಠ ರೂ. 2000/- ಪ್ರತಿ ಫಲಾನುಭವಿಯಂತೆ ಆಯಾ ವರ್ಗದಡಿ ಜಿಲ್ಲೆಗೆ ಒದಗಿಸಿರುವ ಅನುದಾನದಲ್ಲಿ ರೈತರಿಗೆ ಪಾವತಿಸುವುದು ಹಾಗೂ ಲಗತ್ತಿಸಿರುವ **ಅನುಬಂಧ-3C** ರಲ್ಲಿ ರೈತರಿಂದ ಸಹಾಯಧನ ಸ್ವೀಕೃತಿ ಕುರಿತು ದೃಢೀಕರಣ ಪಡೆಯುವುದು.

## ಅನುಬಂಧ-3A

## ರೈತರ ಸ್ವಯಂ ಘೋಷಣೆ

------ತಾಲ್ಲೂಕು, ------ ಹೋಬಳಿ, ........................................ ಗ್ರಾಮದ ರೈತನಾದ ಶ್ರೀ/ಶ್ರೀಮತಿ ............................................................/ ............................................................................ ನಾನು FID/ಆಧಾರ್ ಸಂಖ್ಯೆ.................... .................................................................., ಕೃಷಿ ಭಾಗ್ಯ ಯೋಜನೆಯಡಿಯಲ್ಲಿ ನಿರ್ಮಿಸಿಕೊಳ್ಳುವ ಕೃಷಿ ಹೊಂಡದಲ್ಲಿ ಯಾವುದೇ ಜಾನುವಾರು/ ಜನರು ಆಕಸ್ಮಿಕವಾಗಿ ಬಿದ್ದು ಅವಘಡಗಳು/ ಪ್ರಾಣ ನಷ್ಟ ಸಂಭವಿಸದಂತೆ ತಡೆಯಲು ಕಡ್ಡಾಯವಾಗಿ ತಂತಿ ಬೇಲಿ ಘಟಕವನ್ನು ಅಳವಡಿಸಿಕೊಳ್ಳುತ್ತೇನೆ ಹಾಗೂ ನಿರ್ವಹಿಸುತ್ತೇನೆ ಎಂದು ಈ ಮೂಲಕ ಘೋಷಿಸುತ್ತೇನೆ.

ಇಲ್ಲವಾದಲ್ಲಿ, ಸದರಿ ಕೃಷಿ ಹೊಂಡದಲ್ಲಿ ಸಂಭವಿಸುವ ಆಕಸ್ಮಿಕ ಅವಘಡಗಳಿಗೆ ನಾನೇ ನೇರ ಹೊಣೆಗಾರನಾಗಿರುತ್ತೇನೆ. ಸದರಿ ಅವಘಡಗಳಿಗೆ ಕೃಷಿ ಇಲಾಖೆಯು ಯಾವುದೇ ರೀತಿಯಿಂದಲೂ ಹೊಣೆಯಾಗಿರುವುದಿಲ್ಲ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ಸ್ಥಳ: ರೈತರ ಸಹಿ

ದಿನಾಂಕ: ವಿಳಾಸ: ................................

## ಅನುಬಂಧ-3B

## ತಂತಿ ಬೇಲಿ/ ನೆರಳು ಪರದೆ ಹಣ ಸ್ವೀಕೃತಿ ರಸೀದಿ

------ತಾಲ್ಲೂಕು, ------ ಹೋಬಳಿ, ಗ್ರಾಮದ ರೈತನಾದ ಶ್ರೀ/ಶ್ರೀಮತಿ ............................................................/................................................................................. ನಾನು FID/ಆದಾರ್ ಸಂಖ್ಯೆ.................... ..............................................................., ಕಾರ್ಯಾದೇಶ ಸಂಖ್ಯೆ........................... ಕೃಷಿ ಭಾಗ್ಯ ಯೋಜನೆಯಡಿಯಲ್ಲಿ ------ ತಂತಿ ಬೇಲಿ ಹಾಗೂ ನೆರಳು ಪರದೆ ಘಟಕವನ್ನು ಅಳವಡಿಸಿಕೊಂಡಿದ್ದು, ಸರ್ಕಾರದ ಸಹಾಯಧನ ರೂ. ------/-ಗಳನ್ನು ಕೃಷಿ ಇಲಾಖೆಯಿಂದ ಪಡೆದಿರುತ್ತೇನೆ ಎಂದು ದೃಢೀಕರಿಸಿರುತ್ತೇನೆ

Invoice ಸಂಖ್ಯೆ:_____________, ದಿನಾಂಕ___________ ಸಂಸ್ಥೆ: _____________________

ಸ್ಥಳ: ರೈತರ ಸಹಿ

ದಿನಾಂಕ:

| | | |
|---|---|---|
| ಸಹಾಯಕ ಕೃಷಿ ಅಧಿಕಾರಿ<br>ರೈತ ಸಂಪರ್ಕ ಕೇಂದ್ರ<br>----- ಹೋಬಳಿ | ಕೃಷಿ ಅಧಿಕಾರಿ<br>ರೈತ ಸಂಪರ್ಕ ಕೇಂದ್ರ<br>------- ಹೋಬಳಿ | ಸಹಾಯಕ ಕೃಷಿ ನಿರ್ದೇಶಕರು<br>------- ತಾಲ್ಲೂಕು |

**ಅನುಬಂಧ-3C**

**ತಂತಿ ಬೇಲಿಗೆ ಅಳವಡಿಸಿದ ಸೂಚನಾ ಫಲಕದ ಸ್ವೀಕೃತಿ ರಸೀದಿ**

-----------------ತಾಲ್ಲೂಕು, -------------- ಹೋಬಳಿ, ........................................ ಗ್ರಾಮದ ರೈತನಾದ ಶ್ರೀ/ಶ್ರೀಮತಿ ........................................./................................. ಆದ ನಾನು FID/ಆಧಾರ್ ಸಂಖ್ಯೆ.................... ............................................................., ಕಾರ್ಯಾದೇಶ ಸಂಖ್ಯೆ........................................ ಅನುಸಾರ ಕೃಷಿ ಭಾಗ್ಯ ಯೋಜನೆಯಡಿಯಲ್ಲಿ ............. ಸಾಲಿನಲ್ಲಿ ನಿರ್ಮಿಸಿದ .............. ಅಳತೆಯ ಕೃಷಿ ಹೊಂಡಕ್ಕೆ ತಂತಿ ಬೇಲಿಯನ್ನು ಅಳವಡಿಸಿಕೊಂಡು, ನಮೂನೆ-3 ರನ್ವಯ ಸೂಚನಾ ಫಲಕವನ್ನು ಅಳವಡಿಸಿಕೊಂಡಿದ್ದು ಸರ್ಕಾರದ ಸಹಾಯಧನ ರೂ. ............../- (ರೂ...............................................ಮಾತ್ರ) ಗಳನ್ನು ಕೃಷಿ ಇಲಾಖೆಯಿಂದ ಪಡೆದಿರುತ್ತೇನೆ ಎಂದು ದೃಢೀಕರಿಸಿರುತ್ತೇನೆ

ಸ್ಥಳ:
ದಿನಾಂಕ: ರೈತರ ಸಹಿ

| | | |
|---|---|---|
| ಸಹಾಯಕ ಕೃಷಿ ಅಧಿಕಾರಿ<br>ರೈತ ಸಂಪರ್ಕ ಕೇಂದ್ರ<br>----- ಹೋಬಳಿ | ಕೃಷಿ ಅಧಿಕಾರಿ<br>ರೈತ ಸಂಪರ್ಕ ಕೇಂದ್ರ<br>------- ಹೋಬಳಿ | ಸಹಾಯಕ ಕೃಷಿ ನಿರ್ದೇಶಕರು<br>------- ತಾಲ್ಲೂಕು |

**ವಿಶೇಷ ಸೂಚನೆ:**

1. ಎಲ್ಲಾ ಅಳತೆಯ ಕೃಷಿ ಹೊಂಡಗಳ ಸುತ್ತ ತಂತಿ ಬೇಲಿ ಅಳವಡಿಸುವುದು ಕಡ್ಡಾಯವಾಗಿರುತ್ತದೆ.
2. ಸುರಕ್ಷತಾ ಕ್ರಮವಾಗಿ ಕೃಷಿ ಹೊಂಡದ ಹತ್ತಿರ ಸೂಚನಾ ಫಲಕವನ್ನು ಹಾಗೂ ಹೊಂಡಗಳಲ್ಲಿ ಹಗ್ಗದೊಂದಿಗೆ ಟ್ಯೂಬ್ ಗಳನ್ನು ತಪ್ಪದೇ ಇಳಿಬಿಡುವುದು
3. **ಫಲಾನುಭವಿಯು ಕಡ್ಡಾಯವಾಗಿ ತಂತಿಬೇಲಿ ಹಾಗೂ ಸೂಚನಾ ಫಲಕ ಅಳವಡಿಸಿಕೊಂಡಿರುವುದು ಖಾತರಿಪಡಿಸಿಕೊಂಡ ನಂತರವೇ ಕೃಷಿ ಹೊಂಡ ಹಾಗೂ ಬದು ನಿರ್ಮಾಣಕ್ಕೆ ಸಂಬಂದಿಸಿದ ಬಾಕಿ ಶೇ.25 ರಷ್ಟು ಸಹಾಯಧನ ಹಾಗೂ ತಂತಿ ಬೇಲಿ ಮತ್ತು ಸೂಚನಾ ಫಲಕ ಸಹಾಯಧನವನ್ನು ಪಾವತಿಸುವುದು.**

## 4.5 ಡೀಸೆಲ್/ಪೆಟ್ರೋಲ್/ ಸೋಲಾರ್ ಪಂಪ್‌ಸೆಟ್:

ಕೃಷಿ ಹೊಂಡದಲ್ಲಿ ಸಂಗ್ರಹಣೆಯಾದ ನೀರನ್ನು ಬಳಸಿಕೊಳ್ಳಲು ಡೀಸೆಲ್/ ಪೆಟ್ರೋಲ್/ ಸೋಲಾರ್ ಪಂಪ್‌ಸೆಟ್ ಖರೀದಿಗೆ ಅವಕಾಶವಿರುತ್ತದೆ.

- **ಸೋಲಾರ್ ಪಂಪ್ ಸೆಟ್**: ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಗಮದ (KREDL) ಸೌರಶಕ್ತಿ ಆಧಾರಿತ ಜಾಲಮುಕ್ತ ನೀರಾವರಿ ಪಂಪ್ ಸೆಟ್ ಯೋಜನೆಯಡಿ ಅಥವಾ ಇತರೆ ಇಲಾಖೆಯ ಚಾಲ್ತಿ ಯೋಜನೆಗಳಲ್ಲಿ ಸೋಲಾರ್ ಪಂಪ್‌ಸೆಟ್ ನ್ನು ಅಳವಡಿಸಿದ ಕೃಷಿ ಭಾಗ್ಯ ಪ್ಯಾಕೇಜ್ ನ ಫಲಾನುಭವಿಗಳಿಗೆ ಕೃಷಿ ಭಾಗ್ಯ ಯೋಜನೆಯಡಿ ಪ್ರೋತ್ಸಾಹಧನವಾಗಿ ರೂ. 30,000/- ಗಳನ್ನು ನೀಡುವುದು. **ಇದಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಅಂಶಗಳನ್ನು ಪರಿಗಣಿಸುವುದು.**

  ಪ್ರಧಾನ್ ಮಂತ್ರಿ ಕಿಸಾನ್ ಉರ್ಜಾ ಸುರಕ್ಷಾ ಏವಂ ಉತ್ಥಾನ್ ಮಹಾಭಿಯಾನ್ ಯೋಜನಾ (ಪಿಎಂ-ಕುಸುಮ್): ಪಿಎಂ-ಕುಸುಮ್ ಯೋಜನೆಯ ಘಟಕ-ಬಿ ಯಡಿ 7.5 ಹೆಚ್.ಪಿ. ಸಾಮರ್ಥ್ಯದವರೆಗಿನ Stand-Alone ಸೌರ ನೀರಾವರಿ ಪಂಪ್‌ಸೆಟ್ ಅನ್ನು ರೈತರು ಖರೀದಿಸಬಹುದಾಗಿದ್ದು, ರಾಜ್ಯ ಸರ್ಕಾರದ ಜಾಲಮುಕ್ತ ಸೌರ ನೀರಾವರಿ ಪಂಪ್‌ಸೆಟ್ ಯೋಜನೆಯಡಿ ಮುಂದುವರೆಸಲಾಗುತ್ತಿದೆ. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಗಮವು (KREDL) ಸದರಿ ಯೋಜನೆಯ ಅನುಷ್ಠಾನಕ್ಕೆ ನೇಮಿತ ಸಂಸ್ಥೆಯಾಗಿದೆ. ಸದರಿ ಯೋಜನೆಯಡಿ ಎಲ್ಲಾ ವರ್ಗದ ರೈತರಿಗೆ ಶೇ. 80 ರ ಸಹಾಯಧನದಲ್ಲಿ (ಕೇಂದ್ರ: 30% & ರಾಜ್ಯ: 50%) ಸ್ಟ್ಯಾಂಡ್ ಅಲೋನ್ ಸೌರ ಪಂಪ್ ಸೆಟ್ ಒದಗಿಸಲಾಗುತ್ತಿದೆ.

  ಆದ್ದರಿಂದ, ನವೀಕರಿಸಬಹುದಾದ ಇಂಧನದ ಬಳಕೆಯನ್ನು ಉತ್ತೇಜಿಸುವ ನಿಟ್ಟಿನಲ್ಲಿ ರೈತರಿಗೆ ಸೌರ ನೀರಾವರಿ ಪಂಪ್‌ಸೆಟ್ ಗಳ ಉಪಯುಕ್ತತೆ ಹಾಗೂ ಬಳಕೆಯ ಕುರಿತು ಅರಿವು ಮೂಡಿಸಿ, ಮೇಲಿನ ಯೋಜನೆಗಳಡಿ ಸೌರ ನೀರಾವರಿ ಪಂಪ್‌ಸೆಟ್ ಖರೀದಿಸಲು ಉತ್ತೇಜನ ನೀಡುವುದು ಹಾಗೂ ರೈತರು ಸ್ವತಃ ಸೋಲಾರ್ ಪಂಪ್‌ಸೆಟ್ ನ್ನು ಅಳವಡಿಸಿಕೊಂಡಿದ್ದಲ್ಲಿ ಕೃಷಿ ಭಾಗ್ಯ ಪ್ಯಾಕೇಜ್ ನ ಫಲಾನುಭವಿಗಳಿಗೆ ಯೋಜನೆಯಡಿ ಪ್ರೋತ್ಸಾಹಧನವಾಗಿ ರೂ. 30,000/- ಗಳನ್ನು ಒದಗಿಸುವುದು.

- **ಡೀಸೆಲ್/ಪೆಟ್ರೋಲ್ ಪಂಪ್‌ಸೆಟ್**: ಗರಿಷ್ಟ 10 ಹೆಚ್.ಪಿ. ಸಾಮರ್ಥ್ಯದ ಡೀಸೆಲ್/ಪೆಟ್ರೋಲ್ ಪಂಪ್‌ಸೆಟ್ ಅನ್ನು **SMAM/ ಕೃಷಿ ಯಾಂತ್ರೀಕರಣ** ಯೋಜನೆಗಳ ಮಾರ್ಗಸೂಚಿ ಹಾಗೂ ದರಗಳನ್ವಯ ಅನುಮೋದಿತ ಸಂಸ್ಥೆಗಳಿಂದ ಪಡೆಯುವುದು. ಸಾಮಾನ್ಯ ವರ್ಗದ ರೈತರಿಗೆ ಶೇ.80 ಹಾಗೂ ಪರಿಶಿಷ್ಟ ಜಾತಿ ಹಾಗೂ ಪಂಗಡದ ರೈತರಿಗೆ ಶೇ.90 ರ ರಿಯಾಯಿತಿ ದರದಲ್ಲಿ ನೀಡುವುದು. (ಈಗಾಗಲೇ ಸದರಿ ಘಟಕವನ್ನು ಹೊಂದಿರುವ ಫಲಾನುಭವಿಗೆ ವಿತರಿಸುವಂತಿಲ್ಲ) ಒಗ್ಗೂಡಿಸುವಿಕೆಯಡಿ ಅನುದಾನ ಲಭ್ಯವಿಲ್ಲದಿದ್ದಲ್ಲಿ ಮಾತ್ರ ಕೃಷಿ ಭಾಗ್ಯ ಯೋಜನೆಯಡಿ ವೆಚ್ಚ ಭರಿಸುವುದು.

ಡೀಸೆಲ್/ಪೆಟ್ರೋಲ್ ಪಂಪ್‌ಸೆಟ್ ಘಟಕಗಳ ಅನುಷ್ಠಾನಕ್ಕಾಗಿ ಕೆ-ಕಿಸಾನ್ ತಂತ್ರಾಂಶದ ಕೃಷಿ ಯಾಂತ್ರೀಕರಣ Web Application Module ನಲ್ಲಿ ಕೃಷಿ ಭಾಗ್ಯ ಯೋಜನೆಯಡಿ ಪ್ರತ್ಯೇಕ ಜಿಲ್ಲಾವಾರು ಭೌತಿಕ & ಆರ್ಥಿಕ ಗುರಿಗಳನ್ನು ನೀಡಲಾಗುವುದು.

**ಕೃಷಿ ಭಾಗ್ಯ ಯೋಜನೆಯ ಫಲಾನುಭವಿಗಳಿಗೆ** ಆದ್ಯತೆ ನೀಡಲು ಕೆ-ಕಿಸಾನ್ ತಂತ್ರಾಂಶದ ಕೃಷಿ ಯಾಂತ್ರೀಕರಣ Web Application Module ನಡಿ **Seniority Jump ಗೆ**

ಅವಕಾಶ ಕಲ್ಪಿಸಲಾಗಿರುತ್ತದೆ. ಆದ್ದರಿಂದ ಸದರಿ ಘಟಕಗಳ ಅನುಷ್ಠಾನಕ್ಕೆ ಕೃಷಿ ಭಾಗ್ಯ ಯೋಜನೆಯ ಫಲಾನುಭವಿಗಳಿಗೆ **ಪ್ರಥಮ ಆದ್ಯತೆ** ನೀಡುವ ಮೂಲಕ ಪ್ಯಾಕೇಜ್‌ನ ಎಲ್ಲಾ ಘಟಕಗಳನ್ನು ನಿಗದಿತ ಸಮಯದಲ್ಲಿ ಅನುಷ್ಠಾನ ಮಾಡಲು ಕ್ರಮವಹಿಸುವುದು.

ಅನುಮೋದಿತ ಸಂಸ್ಥೆಯಿಂದ ಡೀಸಲ್/ಪೆಟ್ರೋಲ್ ಸೋಲಾರ್ ಪಂಪ್‌ಸೆಟ್‌ನ್ನು ವಿತರಿಸಿದ ಕೂಡಲೇ, ರೈತ ಸಂಪರ್ಕ ಕೇಂದ್ರದ ಸಹಾಯಕ ಕೃಷಿ ಅಧಿಕಾರಿ/ ಕೃಷಿ ಅಧಿಕಾರಿಗಳು K-KISAN Mobile Appನ Post Inspection ತಂತ್ರಾಂಶದಲ್ಲಿ ಸ್ಥಳ ಪರಿಶೀಲನೆಯನ್ನು ನಡೆಸಿ, ಯಂತ್ರದ Unique ಸಂಖ್ಯೆ ಅನ್ನು K-KISAN Mobile ತಂತ್ರಾಂಶದಲ್ಲಿ ನಮೂದಿಸುವುದು.

## ಅನುಬಂಧ-4A

### ಡೀಸಲ್/ಪೆಟ್ರೋಲ್ ಪಂಪ್‌ಸೆಟ್ - ಒಪ್ಪಿಗೆ ಪತ್ರ ಮತ್ತು ಹಣ ಸಂದಾಯ ರಸೀದಿ

------ತಾಲ್ಲೂಕು, ------ ಹೋಬಳಿ, ಗ್ರಾಮದ ರೈತನಾದ ಶ್ರೀ/ಶ್ರೀಮತಿ ....................................................................../................................................................................ ನಾನು FID/ಆಧಾರ್ ಸಂಖ್ಯೆ.................... ..........................................................., ಕಾರ್ಯಾದೇಶ ಸಂಖ್ಯೆ........................... ಕೃಷಿ ಭಾಗ್ಯ ಯೋಜನೆಯಡಿಯಲ್ಲಿ ------ಯುನಿಟ್ ಡೀಸಲ್/ಪೆಟ್ರೋಲ್ ಪಂಪ್‌ಸೆಟ್ ಘಟಕವನ್ನು ಅಳವಡಿಸಿಕೊಂಡಿದ್ದು, ಸರ್ಕಾರದ ಸಹಾಯಧನ ರೂ. ------/-ಗಳನ್ನು ----- -------------------------------- ಸಂಸ್ಥೆ ರವರಿಗೆ ನೇರವಾಗಿ ವರ್ಗಾವಣೆ ಮಾಡಲು ಒಪ್ಪಿರುತ್ತೇನೆ.

ಡೀಸಲ್/ಪೆಟ್ರೋಲ್ ಪಂಪ್‌ಸೆಟ್: Invoice No____________, ದಿನಾಂಕ___________

ಸ್ಥಳ: ರೈತರ ಸಹಿ

ದಿನಾಂಕ:

### ಡೀಸಲ್/ಪೆಟ್ರೋಲ್ ಪಂಪ್‌ಸೆಟ್ ತೃಪ್ತಿಕರ ಪ್ರಮಾಣ ಪತ್ರ

----- ತಾಲ್ಲೂಕು ------ ಹೋಬಳಿ,________________ಗ್ರಾಮದ ಶ್ರೀ/ ಶ್ರೀಮತಿ _____________________________ಆದ ನಾನು FID/ಆಧಾರ್ ಸಂಖ್ಯೆ..................... ..............................................................., ಕಾರ್ಯಾದೇಶ ಸಂಖ್ಯೆ.......................... ಕೃಷಿ ಭಾಗ್ಯ ಯೋಜನೆಯಡಿಯಲ್ಲಿ ___________ಅಳತೆಯ ಕೃಷಿ ಹೊಂಡ ನಿರ್ಮಿಸಿದ್ದು, ------------- ಸಂಸ್ಥೆಯವರು ಡೀಸಲ್/ಪೆಟ್ರೋಲ್ ಪಂಪ್‌ಸೆಟ್ ಅನ್ನು ಪಡೆದಿರುತ್ತೇನೆ. ಸದರಿ ಡೀಸಲ್/ ಪೆಟ್ರೋಲ್ ಪಂಪ್‌ಸೆಟ್ ತೃಪ್ತಿಕರವಾಗಿ ಕಾರ್ಯನಿರ್ವಹಿಸುತ್ತಿರುವುದೆಂದು ದೃಢೀಕರಿಸಿರುತ್ತೇನೆ.

ಸ್ಥಳ: ರೈತರ ಸಹಿ

ದಿನಾಂಕ:

| | | |
|---|---|---|
| ಸಹಾಯಕ ಕೃಷಿ ಅಧಿಕಾರಿ<br>ರೈತ ಸಂಪರ್ಕ ಕೇಂದ್ರ<br>----- ಹೋಬಳಿ | ಕೃಷಿ ಅಧಿಕಾರಿ<br>ರೈತ ಸಂಪರ್ಕ ಕೇಂದ್ರ<br>------- ಹೋಬಳಿ | ಸಹಾಯಕ ಕೃಷಿ ನಿರ್ದೇಶಕರು<br>------- ತಾಲ್ಲೂಕು |

## ಅನುಬಂಧ-4B

### ಸೋಲಾರ್ ಪಂಪ್‌ಸೆಟ್ - ಒಪ್ಪಿಗೆ ಪತ್ರ ಮತ್ತು ಹಣ ಸಂದಾಯ ರಸೀದಿ

------ತಾಲ್ಲೂಕು, ------ ಹೋಬಳಿ, ಗ್ರಾಮದ ರೈತನಾದ ಶ್ರೀ/ಶ್ರೀಮತಿ ....................................................................../................................................................................ ನಾನು________________FID/ಆಧಾರ್ ಸಂಖ್ಯೆ............................................... ಕಾರ್ಯಾದೇಶ ಸಂಖ್ಯೆ.........................., ________________ ಇಲಾಖೆಯ __________________ ಯೋಜನೆಯಡಿಯಲ್ಲಿ ------ಯುನಿಟ್/ H.P ಸೋಲಾರ್ ಪಂಪ್‌ಸೆಟ್ ಘಟಕವನ್ನು ಅಳವಡಿಸಿಕೊಂಡಿದ್ದು, ಸರ್ಕಾರದ ಪ್ರೋತ್ಸಾಹಧನ ರೂ. ------/-ಗಳನ್ನು ಪಡೆದಿರುತ್ತೇನೆ.

ಸೋಲಾರ್ ಪಂಪ್‌ಸೆಟ್: Invoice No____________, ದಿನಾಂಕ___________

ಸ್ಥಳ: ರೈತರ ಸಹಿ
ದಿನಾಂಕ:

**ಸೋಲಾರ್ ಪಂಪ್‌ಸೆಟ್ ತೃಪ್ತಿಕರ ಪ್ರಮಾಣ ಪತ್ರ**

------ತಾಲ್ಲೂಕು, ------ ಹೋಬಳಿ, ಗ್ರಾಮದ ರೈತನಾದ ಶ್ರೀ/ಶ್ರೀಮತಿ ......................................................./....................................................................... ನಾನು___________________FID/ಆಧಾರ್ ಸಂಖ್ಯೆ................................................ ಕಾರ್ಯಾದೇಶ ಸಂಖ್ಯೆ.........................., _________________ ಇಲಾಖೆಯ ________________________ ಯೋಜನೆಯಡಿಯಲ್ಲಿ/ ಸ್ವತಃ ಖರೀದಿಸಲಾದ ------ಯುನಿಟ್/ H.P ಸೋಲಾರ್ ಪಂಪ್‌ಸೆಟ್ ಘಟಕವನ್ನು ಅಳವಡಿಸಿಕೊಂಡಿದ್ದು, ಇದಕ್ಕಾಗಿ ಸರ್ಕಾರದ ಪ್ರೋತ್ಸಾಹಧನ ರೂ. ---------------/- ಗಳನ್ನು ಪಡೆದಿರುತ್ತೇನೆ. ಸದರಿ ಸೋಲಾರ್ ಪಂಪ್‌ಸೆಟ್ ತೃಪ್ತಿಕರವಾಗಿ ಕಾರ್ಯನಿರ್ವಹಿಸುತ್ತಿರುವುದೆಂದು ದೃಢೀಕರಿಸಿರುತ್ತೇನೆ.

ಸ್ಥಳ: ರೈತರ ಸಹಿ

ದಿನಾಂಕ:

| | | |
|---|---|---|
| ಸಹಾಯಕ ಕೃಷಿ ಅಧಿಕಾರಿ<br>ರೈತ ಸಂಪರ್ಕ ಕೇಂದ್ರ<br>----- ಹೋಬಳಿ | ಕೃಷಿ ಅಧಿಕಾರಿ<br>ರೈತ ಸಂಪರ್ಕ ಕೇಂದ್ರ<br>------- ಹೋಬಳಿ | ಸಹಾಯಕ ಕೃಷಿ ನಿರ್ದೇಶಕರು<br>------- ತಾಲ್ಲೂಕು |

**ಅನುಬಂಧ-4C**

**ಡೀಸೆಲ್/ಪೆಟ್ರೋಲ್ ಪಂಪ್‌ಸೆಟ್ ಈಗಾಗಲೇ ಸ್ವಯಂ ಖರೀದಿಸಿರುವ ಕುರಿತು ರೈತರ ದೃಢೀಕರಣ ಪತ್ರ**

__________ತಾಲ್ಲೂಕು _________ಹೋಬಳಿ,_________________ಗ್ರಾಮದ ಶ್ರೀ/ ಶ್ರೀಮತಿ _____________________________ಆದ ನಾನು FID/ಆಧಾರ್ ಸಂಖ್ಯೆ.................... ..........................................................................., ಸ್ವಂತವಾಗಿ ಡೀಸಲ್/ಪೆಟ್ರೋಲ್ ಪಂಪ್‌ಸೆಟ್ ಅನ್ನು ಖರೀದಿಸಿದ್ದು, ಸುಸ್ಥಿತಿಯಲ್ಲಿರುತ್ತದೆ ಎಂದು ಈ ಮೂಲಕ ದೃಢೀಕರಿಸಿದೆ.

ಸ್ಥಳ: ರೈತರ ಸಹಿ

ದಿನಾಂಕ:

## 4.6 ಸೂಕ್ಷ್ಮ ನೀರಾವರಿ ಘಟಕಗಳು (ತುಂತುರು/ಹನಿ):

ಬೆಳೆಗಳಿಗೆ ಸಂದಿಗ್ಧ ಹಂತಗಳಲ್ಲಿ ರಕ್ಷಣಾತ್ಮಕ ನೀರಾವರಿಗಾಗಿ ಬಳಸಿಕೊಳ್ಳಲು ರೈತರಿಗೆ ಗರಿಷ್ಠ ಒಂದು (1.0) ಹೆಕ್ಟೇರ್ ಪ್ರದೇಶಕ್ಕೆ ಬೇಕಾಗುವ ಸೂಕ್ಷ್ಮ ನೀರಾವರಿ ಘಟಕಗಳನ್ನು ಇಲಾಖೆಯ ಸೂಕ್ಷ್ಮ ನೀರಾವರಿ ಯೋಜನೆಯ ದರ ಕರಾರು ಹಾಗೂ ಮಾರ್ಗಸೂಚಿಯಂತೆ, ಶೇ.90 ರ ಸಹಾಯಧನದಲ್ಲಿ (ಸಾಮಾನ್ಯ ಹಾಗೂ ಪರಿಶಿಷ್ಟ ಜಾತಿ/ಪಂಗಡ) ಒದಗಿಸುವುದು. ಸೂಕ್ಷ್ಮ

ನೀರಾವರಿ (ತುಂತುರು/ಹನಿ) ಘಟಕಗಳನ್ನು ಕಡ್ಡಾಯವಾಗಿ ಒಗ್ಗೂಡಿಸುವಿಕೆಯಡಿ ಅನುಷ್ಠಾನ ಮಾಡಬೇಕಾಗಿದ್ದು, ಕೃಷಿ ಭಾಗ್ಯ ಯೋಜನೆಯಡಿ ವೆಚ್ಚ ಭರಿಸಲು ಅವಕಾಶವಿರುವುದಿಲ್ಲ. ಸದರಿ ಘಟಕಗಳಿಗೆ PM-RKVY-PDMC/ಅಟಲ್ ಭೂಜಲ ಯೋಜನೆಯಡಿ ವೆಚ್ಚ ಭರಿಸಬಹುದಾಗಿದೆ.

- ಸೂಕ್ಷ್ಮ ನೀರಾವರಿ (ತುಂತುರು/ಹನಿ) ಘಟಕಗಳನ್ನು ಅಟಲ್ ಭೂಜಲ ಯೋಜನೆ ವ್ಯಾಪ್ತಿಯ 41 ತಾಲ್ಲೂಕುಗಳ ಆಯ್ದ ಗ್ರಾಮ ಪಂಚಾಯಿತಿಗಳಲ್ಲಿ ಆದ್ಯತೆ ಮೇರೆಗೆ ಸದರಿ ಯೋಜನೆಯ ಅನುದಾನವನ್ನು ಬಳಸಿಕೊಂಡು ಮಾರ್ಗಸೂಚಿಯನ್ವಯ ಅನುಷ್ಠಾನ ಮಾಡುವುದು ಹಾಗೂ ಅನುದಾನ ಲಭ್ಯವಿಲ್ಲದಿದ್ದಲ್ಲಿ ಮಾತ್ರ PM-RKVY-PDMC ಯೋಜನೆಯಡಿ ಭರಿಸುವುದು. ಉಳಿದ ತಾಲ್ಲೂಕುಗಳಲ್ಲಿ PM-RKVY-PDMC ಯೋಜನೆಯ ಅನುದಾನವನ್ನು ಬಳಸಿಕೊಂಡು ಮಾರ್ಗಸೂಚಿಯನ್ವಯ ಸದರಿ ಘಟಕಗಳನ್ನು ಅನುಷ್ಠಾನ ಮಾಡುವುದು.
- ಕೃಷಿ ಭಾಗ್ಯ ಯೋಜನೆಯಡಿ ಸೂಕ್ಷ್ಮ ನೀರಾವರಿ (ತುಂತುರು/ಹನಿ) ಘಟಕಗಳನ್ನು ಕಡ್ಡಾಯವಾಗಿ ಕೆ-ಕಿಸಾನ್ ತಂತ್ರಾಂಶದ ಸೂಕ್ಷ್ಮ ನೀರಾವರಿ Web Application Module ನಡಿ ಹಂತ ಹಂತವಾಗಿ ಅನುಷ್ಠಾನ ಹಾಗೂ ದಾಖಲಾತಿ ನಿರ್ವಹಣೆ ಮಾಡುವುದು.
- **ಕೃಷಿ ಭಾಗ್ಯ ಯೋಜನೆಯ ಫಲಾನುಭವಿಗಳಿಗೆ** ಆದ್ಯತೆ ನೀಡಲು ಕೆ-ಕಿಸಾನ್ ತಂತ್ರಾಂಶದ ಸೂಕ್ಷ್ಮ ನೀರಾವರಿ Web Application Module ನಡಿ **Seniority Jump ಗೆ** ಅವಕಾಶ ಕಲ್ಪಿಸಲಾಗಿರುತ್ತದೆ. ಆದ್ದರಿಂದ ಸದರಿ ಘಟಕಗಳ ಅನುಷ್ಠಾನಕ್ಕೆ ಕೃಷಿ ಭಾಗ್ಯ ಯೋಜನೆಯ ಫಲಾನುಭವಿಗಳಿಗೆ **ಪ್ರಥಮ ಆದ್ಯತೆ** ನೀಡುವ ಮೂಲಕ ಪ್ಯಾಕೇಜ್‌ನ ಎಲ್ಲಾ ಘಟಕಗಳನ್ನು ನಿಗದಿತ ಸಮಯದಲ್ಲಿ ಅನುಷ್ಠಾನ ಮಾಡಲು ಕ್ರಮವಹಿಸುವುದು.
- ಸಂಸ್ಥೆಯಿಂದ ಸೂಕ್ಷ್ಮ (ತುಂತುರು/ಹನಿ) ನೀರಾವರಿ ಘಟಕವನ್ನು ಅಳವಡಿಸಿದ ಕೂಡಲೇ, ರೈತ ಸಂಪರ್ಕ ಕೇಂದ್ರದ ಸಹಾಯಕ ಕೃಷಿ ಅಧಿಕಾರಿ/ ಕೃಷಿ ಅಧಿಕಾರಿಗಳು ಸ್ಥಳ ಪರಿಶೀಲನೆಯನ್ನು PM-RKVY-PDMC/ Atal Bhu Jal ಯೋಜನೆಯ ಮಾರ್ಗಸೂಚಿಯನ್ವಯ K-KISAN Mobile Appನ Post Inspection ತಂತ್ರಾಂಶದಲ್ಲಿ ಮಾಡುವುದು.
- ಸದರಿ ಘಟಕಗಳನ್ನು ಫಲಾನುಭವಿ ರೈತನ ಜಮೀನಿನಲ್ಲಿ ಅಳವಡಿಸಿರುವ ಬಗ್ಗೆ ಖಾತರಿಪಡಿಸಿಕೊಂಡು, ದೃಢೀಕರಣದೊಂದಿಗೆ ನಿಯಮಾನುಸಾರ ಸಂಬಂಧಪಟ್ಟ ಸಂಸ್ಥೆಗೆ ಒಟ್ಟಾರೆ ಸಹಾಯಧನ ಮೊತ್ತವನ್ನು PM-RKVY-PDMC/ Atal Bhu Jal ಯೋಜನೆಯಡಿ ಪಾವತಿಸಬಹುದಾಗಿರುತ್ತದೆ.

## ಅನುಬಂಧ-5

### ಸೂಕ್ಷ್ಮ ನೀರಾವರಿ- ಒಪ್ಪಿಗೆ ಪತ್ರ ಮತ್ತು ಹಣ ಸಂದಾಯ ರಸೀದಿ

------ತಾಲ್ಲೂಕು, ------ ಹೋಬಳಿ, ................................ ಗ್ರಾಮದ ರೈತನಾದ ಶ್ರೀ/ಶ್ರೀಮತಿ ......................................................................../.......................................................................... ನಾನು FID/ಆಧಾರ್ ಸಂಖ್ಯೆ.................... ............................................................, ಕಾರ್ಯಾದೇಶ ಸಂಖ್ಯೆ.......................... ಕೃಷಿ ಭಾಗ್ಯ ಯೋಜನೆಯಡಿಯಲ್ಲಿ ------ ಹೆಕ್ಟರ್ ಯುನಿಟ್ ಸೂಕ್ಷ್ಮ (ತುಂತುರು/ಹನಿ) ನೀರಾವರಿ ಘಟಕವನ್ನು ಅಳವಡಿಸಿಕೊಂಡಿದ್ದು, ಸರ್ಕಾರದ ಸಹಾಯಧನ ರೂ. ------/-ಗಳನ್ನು --------------------- ಸಂಸ್ಥೆ ರವರಿಗೆ ನೇರವಾಗಿ ವರ್ಗಾವಣೆ ಮಾಡಲು ಒಪ್ಪಿರುತ್ತೇನೆ. ಲಘು ನೀರಾವರಿ: Invoice No_______________, ದಿನಾಂಕ___________________

ಸ್ಥಳ: ರೈತರ ಸಹಿ

ದಿನಾಂಕ:

**ಸೂಕ್ಷ್ಮ ನೀರಾವರಿ ಘಟಕ ತೃಪ್ತಿಕರ ಪ್ರಮಾಣ ಪತ್ರ, ಐ.ಎಸ್.ಐ (ISI) ಪ್ರಮಾಣ ಪತ್ರ ಮತ್ತು ಅಳವಡಿಕೆ ಪ್ರಮಾಣ ಪತ್ರ**

------ ತಾಲ್ಲೂಕು ------- ಹೋಬಳಿ, ________________ಗ್ರಾಮದ ಶ್ರೀ/ಶ್ರೀಮತಿ ___________________________________ ಆದ ನಾನು FID/ಆಧಾರ್ ಸಂಖ್ಯೆ.................... ............................................................., ಕಾರ್ಯಾದೇಶ ಸಂಖ್ಯೆ.......................... ಕೃಷಿ ಭಾಗ್ಯ ಯೋಜನೆಯಡಿಯಲ್ಲಿ ಕೃಷಿ ಹೊಂಡ ನಿರ್ಮಿಸಿದ್ದು, ಬೆಳೆಗಳಿಗೆ ನೀರು ಹಾಯಿಸಲು ----------- ಸಂಸ್ಥೆಯ ----- ಹೆಕ್ಟರ್ ಯುನಿಟ್ ಸೂಕ್ಷ್ಮ (ತುಂತುರು/ಹನಿ) ನೀರಾವರಿ ಘಟಕವನ್ನು ಅಳವಡಿಸಿರುತ್ತಾರೆ. ಸದರಿ ಘಟಕವು ಐ.ಎಸ್.ಐ (ISI) ಚಿಹ್ನೆ ಹೊಂದಿರುತ್ತದೆ ಹಾಗೂ ಸದರಿ ಉಪಕರಣವು ತೃಪ್ತಿಕರವಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ದೃಢೀಕರಿಸಿರುತ್ತೇನೆ.

ಸ್ಥಳ: ರೈತರ ಸಹಿ

ದಿನಾಂಕ:

ಸದರಿ ರೈತರು ಖರೀದಿಸಿರುವ ------ ಘಟಕದ ಭೌತಿಕ ಪರಿಶೀಲನೆಯನ್ನು ದಿ --------- ರಂದು ಮಾಡಿದ್ದು, ಉತ್ತಮವಾಗಿ ಕಾರ್ಯನಿರ್ವಹಿಸುತ್ತದೆ ಎಂದು ದೃಢೀಕರಿಸಲಾಗಿದೆ.

| | | |
|---|---|---|
| ಸಹಾಯಕ ಕೃಷಿ ಅಧಿಕಾರಿ<br>ರೈತ ಸಂಪರ್ಕ ಕೇಂದ್ರ<br>------ ಹೋಬಳಿ | ಕೃಷಿ ಅಧಿಕಾರಿ<br>ರೈತ ಸಂಪರ್ಕ ಕೇಂದ್ರ<br>------ ಹೋಬಳಿ | ಸಹಾಯಕ ಕೃಷಿ ನಿರ್ದೇಶಕರು<br>----- ತಾಲ್ಲೂಕು, |

**5. ದಾಖಲಾತಿ ನಿರ್ವಹಣೆ:**

1. ರೈತರಿಂದ ಸ್ವೀಕೃತಗೊಂಡ ದಾಖಲಾತಿಯನ್ನು ಜೇಷ್ಠತಾ ವಹಿಯಲ್ಲಿ ಹಾಗೂ ನೋಂದಣಿಯನ್ನು K-KISAN Web ತಂತ್ರಾಂಶದಲ್ಲಿ ನಿರ್ವಹಿಸುವುದು.
2. ಅಳತೆ ಪುಸ್ತಕಗಳ ದಾಸ್ತಾನು ವಹಿ (ತಾಲ್ಲೂಕು ಸ.ಕೃ.ನಿ ಕಛೇರಿ)
3. ಅಂದಾಜು ಪತ್ರಿಕೆ ಮಂಜೂರಾತಿ ವಹಿ (ಸ.ಕೃ.ನಿ ರವರ ಅನುಮೋದನೆಯೊಂದಿಗೆ ರೈ.ಸಂ.ಕೇಂದ್ರದಲ್ಲಿ ನಿರ್ವಹಣೆ)
4. ಸ್ಥಳದಲ್ಲಿಯೇ ನೀರು ಸಂರಕ್ಷಿಸುವ ಘಟಕಗಳಾದ ಕ್ಷೇತ್ರ ಬದು, ಕೃಷಿ ಹೊಂಡ (Silt trap ಒಳಗೊಂಡಂತೆ), ಪಾಲಿಥೀನ್ ಹೊದಿಕೆ ಮತ್ತು ಕೃಷಿ ಹೊಂಡದ ಸುತ್ತಲೂ ತಂತಿ ಬೇಲಿ, ದಾಖಲಾತಿ(**Check Measurement (CMR)/ MB recording** etc.,-) ನಿರ್ವಹಣೆಯೊಂದಿಗೆ ಸೂಚನಾ ಫಲಕ ಅಳವಡಿಸಿದ ದಾಖಲಾತಿ ನಿರ್ವಹಣೆಯು ರೈತ ಸಂಪರ್ಕ ಕೇಂದ್ರದ ಸಹಾಯಕ ಕೃಷಿ ಅಧಿಕಾರಿ/ಕೃಷಿ ಅಧಿಕಾರಿಗಳ ಜವಾಬ್ದಾರಿಯಾಗಿರುತ್ತದೆ.
5. ಒಟ್ಟು ಪ್ಯಾಕೇಜಿಗೆ ಫಲಾನುಭವಿವಾರು ಫೋಟೋವ್ನಾರೆಯನ್ನು ರೈತ ಸಂಪರ್ಕ ಕೇಂದ್ರದಲ್ಲಿ ಕಡ್ಡಾಯವಾಗಿ ನಿರ್ವಹಿಸುವುದು.
6. K-KISAN Mobile ತಂತ್ರಾಂಶದಲ್ಲಿ ಫೋಟೋ ದಾಖಲಾತಿ:

i. Pre-Inspection (ಕ್ಷೇತ್ರ ಬದು, ಕೃಷಿ ಹೊಂಡ)

ii. Post-Inspection

- ಕ್ಷೇತ್ರ ಬದು
- ಕೃಷಿ ಹೊಂಡ (Silt trap ಒಳಗೊಂಡಂತೆ)
- ಪಾಲಿಥೀನ್ ಹೊದಿಕೆ
- ಡೀಸಲ್/ಪೆಟ್ರೋಲ್ / ಸೋಲಾರ್ ಪಂಪ್ ಸೆಟ್
- ಸೂಕ್ಷ್ಮ (ತುಂತುರು/ಹನಿ) ನೀರಾವರಿ ಘಟಕ
- ತಂತಿ ಬೇಲಿ

**ಕೃಷಿ ಭಾಗ್ಯ ಯೋಜನೆಯಡಿ ಆಯ್ಕೆಯಾಗಿರುವ ಫಲಾನುಭವಿಗಳಿಗೆ ಸಂಬಂಧಿಸಿದಂತೆ ಘಟಕಗಳ ಅನುಷ್ಠಾನದಲ್ಲಿ, ಈ ಕೆಳಕಂಡಂತೆ ದಾಖಲಾತಿಗಳನ್ನು ಕಡ್ಡಾಯವಾಗಿ ನಿರ್ವಹಿಸಲು ತಿಳಿಸಿದೆ.**

1. ರೈತರ ಮೂಲ ದಾಖಲೆಗಳು
   - ರೈತರ ಅರ್ಜಿ
   - ರೈತರ ಭಾವಚಿತ್ರ
   - ಆಧಾರ್ ಪ್ರತಿ
   - ಪಹಣಿ ಪ್ರತಿ
   - ಜಾತಿ ಪ್ರಮಾಣ ಪತ್ರ,
   - ಬ್ಯಾಂಕ್ ಪಾಸ್ ಬುಕ್ ಪ್ರತಿ
2. ಪ್ರತಿ ಫಲಾನುಭವಿಗಳಿಗೆ ಘಟಕವಾರು ಕಾರ್ಯಾದೇಶ ನೀಡಿದ ಪ್ರತಿ (Sanction order).
3. **GPS** ಆಧರಿಸಿದ ಕಾಮಗಾರಿ ಪ್ರಾರಂಭದ ಮೊದಲು, ಕಾರ್ಯ ಪ್ರಗತಿಯಲ್ಲಿದ್ದಾಗ, ಹಾಗೂ ಅಂತಿಮಗೊಳಿಸಿದ ಭಾವಚಿತ್ರ. ಇದೇ ರೀತಿ ಇತರೆ ಘಟಕಗಳ ಧೃಡೀಕೃತ ಬಿಲ್ಲುಗಳು, ದಾಖಲೆಗಳ ಹಾಗೂ ಛಾಯಾಚಿತ್ರಗಳನ್ನು ದಾಖಲಿಸುವುದು. (ತಾಲ್ಲೂಕು ಸ.ಕೃ.ನಿ ಕಛೇರಿ)
4. ಸ.ಕೃ.ನಿ /ಉ.ಕೃ.ನಿ/ಜ.ಕೃ.ನಿ ಯವರಿಂದ ಮಂಜೂರಾದ ಅಂದಾಜು ಪಟ್ಟಿಯ ಪ್ರತಿ (Technical Sanction copy of the estimate)
5. ಪಾಲಿಥೀನ್ ಲೈನಿಂಗ್/ ಡೀಸಲ್/ ಪೆಟ್ರೋಲ್/ ಸೋಲಾರ್ ಪಂಪ್‌ಸೆಟ್ / ಸೂಕ್ಷ್ಮ ನೀರಾವರಿ ಘಟಕಗಳಿಗೆ ಇಲಾಖೆಯಿಂದ ಅನುಮೋದಿಸಿದ ಅಧಿಕೃತ ಮಾರಾಟಗಾರರಿಂದ ಪಡೆದ ರಸೀದಿಗಳು.
6. ರೈತರು ಕೃಷಿ ಹೊಂಡಗಳಿಗೆ ತಂತಿ ಬೇಲಿ ಖರೀದಿಸಿ ಅಳವಡಿಸಿರುವ, ದಿನಾಂಕ ಮತ್ತು ಮೊತ್ತದ ರಸೀದಿ.
7. ಎಲ್ಲಾ ಘಟಕಗಳ ರೈತರ ವಂತಿಕೆ ಪಾವತಿಯ R.T.G.S/NEFT/ACCOUNT TRANSFER ದಾಖಲಾತಿ. (ಅನುದಾನದ ಮೊತ್ತ/ ಬ್ಯಾಂಕ್ ಹೆಸರು/ ಶಾಖೆ ಹೆಸರು/ ಇತರೆ ಮಾಹಿತಿ ಸ.ಕೃ.ನಿ ಯವರ ಶಿಫಾರಸ್ಸಿನೊಂದಿಗೆ)
8. ಇಲಾಖೆಯಿಂದ ನೀಡಿರುವ ಸವಲತ್ತುಗಳನ್ನು ಪರಭಾರೆ ಮಾಡದಿರುವ ಬಗ್ಗೆ ರೂ.100/- ಛಾಪಾ ಕಾಗದದಲ್ಲಿ ಮುಚ್ಚಳಿಕೆ ಪಡೆಯುವುದು ಮತ್ತು ಪರಭಾರೆಯಾಗಿರುವುದು ಯಾವುದೇ ಹಂತದಲ್ಲಿ ಕಂಡು ಬಂದಲ್ಲಿ ಸಹಾಯಧನವನ್ನು ವಸೂಲಿ ಮಾಡುವ

ಸಂಪೂರ್ಣ ಅಧಿಕಾರ ಕೃಷಿ ಇಲಾಖೆಗೆ ಇರುತ್ತದೆಂದು ರೈತರಿಗೆ ಲಿಖಿತ ಸೂಚನೆ ನೀಡುವುದು.

9. ಅಳತೆ ತಪಾಸಣೆ ವರದಿಗಳು (CMR)
   - ರೈತ ಸಂಪರ್ಕ ಕೇಂದ್ರದ ಕೃಷಿ ಅಧಿಕಾರಿ/ಸಹಾಯಕ ಕೃಷಿ ಅಧಿಕಾರಿ- ಶೇ. **100**
   - ತಾಲ್ಲೂಕು ಸ.ಕೃ.ನಿ- ಶೇ. **15**
   - ಉ.ಕೃ.ನಿ- ಶೇ. **5**
   - ಜಿಲ್ಲಾ ಜ.ಕೃ.ನಿ- ಶೇ. **2**
10. ಯಶೋಗಾಥೆಗಳ ಬಗ್ಗೆ ಕಡತ.
11. ಆದಾಯ ತೆರಿಗೆ ನಿಯಮಗಳನ್ವಯ ಆದಾಯ ತೆರಿಗೆಯನ್ನು, ಎಲ್ಲಾ ಕಾಮಗಾರಿ ಬಿಲ್ಲುಗಳಲ್ಲಿ ಕಡಿತಗೊಳಿಸಬೇಕು ಹಾಗೂ ಸದರಿ ತೆರಿಗೆ ಹಣವನ್ನು ಸಂಬಂಧಪಟ್ಟ ಇಲಾಖೆಗೆ ನಿಯಮಾನುಸಾರ ತುಂಬಬೇಕು.

**6. ದಾಸ್ತಾನು ನಿರ್ವಹಣೆ:**

ಕೃಷಿ ಭಾಗ್ಯ ಯೋಜನೆಯಡಿ HDPE geo-membrane sheet/ಪಂಪ್ ಸೆಟ್ (ಡೀಸೆಲ್/ಪೆಟ್ರೋಲ್/ ಸೋಲಾರ್)/ ಸೂಕ್ಷ್ಮ (ತುಂತುರು/ಹನಿ) ನೀರಾವರಿ ಘಟಕಗಳನ್ನು ಇಲಾಖೆಯ ಮಾರ್ಗಸೂಚಿಯನ್ವಯ ಅಧಿಸೂಚಿಸಿದ ರಿಯಾಯಿತಿಯನ್ವಯ ಮತ್ತು ಖರೀದಿ ನಿಯಮಮಮಗಳನ್ವಯ ಸಹಾಯಕ ಕೃಷಿ ನಿರ್ದೇಶಕರು ಕಚೇರಿಯ **ಕೇಂದ್ರೀಯ ದಾಸ್ತಾನು ವಹಿ**ಯಲ್ಲಿ ದಾಸ್ತಾನು ಸ್ವೀಕೃತಿ ಅವಶ್ಯವಿರುತ್ತದೆ.

ರೈತ ಸಂಪರ್ಕ ಕೇಂದ್ರ ಮಟ್ಟದಲ್ಲಿ ಕೃಷಿ ಭಾಗ್ಯ ಯೋಜನೆಗೆ ಸಂಬಂಧಿಸಿದಂತೆ, ಪ್ರತ್ಯೇಕ ವಹಿ ನಿರ್ವಹಿಸಿ ಫಲಾನುಭವಿವಾರು, ಇಲಾಖೆಯಿಂದ ಸಹಾಯಧನ ಒದಗಿಸಿರುವ ಸಾಮಗ್ರಿಗಳ/ ಕಾಮಗಾರಿಗಳ ವಿವರಗಳನ್ನು ನಮೂದಿಸಿ ರೈತರ ಸಹಿ ಪಡೆಯಲು ಸೂಚಿಸಿದೆ.

**ಪ್ರಚಾರ ಕಾರ್ಯಕ್ಕೆ ಭರಿಸಬಹುದಾದ ವೆಚ್ಚ:**

- ಕೃಷಿ ಭಾಗ್ಯ ಯೋಜನೆಯ ಬಗ್ಗೆ ರೈತರಿಗೆ ಪತ್ರಿಕಾ ಪ್ರಕಟಣೆ/ಸಮೂಹ ಮಾಧ್ಯಮಗಳ ಮೂಲಕ ವ್ಯಾಪಕ ಪ್ರಚಾರದ ವೆಚ್ಚ
- ತಾಲ್ಲೂಕು ಮಟ್ಟದ ಕೃಷಿ ಭಾಗ್ಯ ಯೋಜನೆಯ ಒಂದು ದಿನದ ತರಬೇತಿಯ ವೆಚ್ಚ
- ಪ್ರಚಾರ ಕಾರ್ಯಕ್ಕೆ ಭರಿಸಲಾದ ವೆಚ್ಚ ಹಾಗೂ ತಾಲ್ಲೂಕು/ಜಿಲ್ಲಾ ಮಟ್ಟದ ಕೃಷಿ ಮೇಳದಲ್ಲಿ ಮಾದರಿ ಪ್ರದರ್ಶನ.

**ಯೋಜನೆಯಡಿ ಬಿಡುಗಡೆ ಮಾಡುವ ಆಡಳಿತಾತ್ಮಕ ಅನುದಾನವನ್ನು (059) ಈ ಕೆಳಕಂಡಂತೆ ವೆಚ್ಚ ಭರಿಸಬಹುದಾಗಿದೆ.**

- ಯೋಜನೆಯ ಉಸ್ತುವಾರಿ
- ಅರ್ಜಿ ಮುದ್ರಣ: ರೈತರಿಗೆ ವಿತರಿಸಲಾದ ಅರ್ಜಿ ನಮೂನೆ ಪ್ರತಿಗಳಿಗೆ
- ದಾಖಲಾತಿ ನಿರ್ವಹಣೆ
- ಕ್ಷೇತ್ರೋತ್ಸವ ಕಾರ್ಯಕ್ರಮ ಮತ್ತು ಯಶೋಗಾಥೆ ದಾಖಲೀಕರಣ
- ಗುಣ ನಿಯಂತ್ರಣ ಮಾದರಿ ವಿಶ್ಲೇಷಣೆ ವೆಚ್ಚ
- ಯೋಜನೆಯ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮ- ಪ್ರಚಾರ/ಕ್ಷೇತ್ರೋತ್ಸವ/ಕೃಷಿ ಮೇಳ

- **Data entry Operator ಸೇವೆ: ಜಿಲ್ಲೆಯಲ್ಲಿ ಅನುದಾನ ಲಭ್ಯತೆ ಅನುಸಾರವಾಗಿ ಅವಶ್ಯವಿರುವ ತಾಲ್ಲೂಕಿಗೆ ಅಗತ್ಯವಿರುವ ಅವಧಿಗೆ ಮಾತ್ರ ತಾಲ್ಲೂಕಿಗೆ ಒಬ್ಬರಂತೆ ಡಾಟಾ ಎಂಟ್ರಿ ಆಪರೇಟರ್ ಗಳನ್ನು ನೇಮಕ ಮಾಡಿಕೊಳ್ಳುವುದು** ಹಾಗೂ ಅವರ ವೇತನ/ಗೌರವಧನವನ್ನು ಪಾವತಿಸಲು ಕಾರ್ಮಿಕ ಇಲಾಖೆಯ ಕನಿಷ್ಟ ವೇತನ ಮಾರ್ಗಸೂಚಿಯನ್ನು ಅನುಸರಿಸಬಹುದಾಗಿರುತ್ತದೆ.
- ಕೇಂದ್ರ ಕಚೇರಿಯಲ್ಲಿ ಯೋಜನೆಯಡಿ ಒಂದು Data entry Operator ಸೇವೆಗೆ

**ಘಟಕಗಳ ಅನುಷ್ಠಾನ ನಂತರ ಅನುದಾನ ಪಾವತಿ ವಿಧಾನ:**

1. ಕ್ಷೇತ್ರ ಬದು ನಿರ್ಮಾಣ ಹಾಗೂ ಕೃಷಿಹೊಂಡ ಪೂರ್ಣಗೊಂಡ ನಂತರ ಕೃಷಿ ಹೊಂಡದ ಸುತ್ತಲೂ ತಂತಿ ಬೇಲಿ ನಿರ್ಮಿಸಿಕೊಳ್ಳುವ ಬಗ್ಗೆ ರೈತರಿಂದ ದೃಡೀಕರಣ ಪತ್ರ ಪಡೆದುಕೊಂಡು, ಕ್ಷೇತ್ರ ಬದು ಹಾಗೂ ಕೃಷಿಹೊಂಡ ಘಟಕಗಳಿಗೆ ಸಂಬಂಧಿಸಿದ ಒಟ್ಟು ಸಹಾಯಧನದ ಶೇ. 75 ರಷ್ಟು ಮೊತ್ತವನ್ನು ರೈತರ ಖಾತೆಗೆ ಜಮೆ ಮಾಡುವುದು.
2. ಪಾಲಿಥೀನ್ ಹೊದಿಕೆಗೆ ರೈತರ ವಂತಿಕೆ ಪಾವತಿಸಿ, ಕೃಷಿಹೊಂಡದಲ್ಲಿ ಪಾಲಿಥೀನ್ ಹೊದಿಕೆಯ ಅಳವಡಿಕೆಯ ನಂತರ ಸರಬರಾಜು ಸಂಸ್ಥೆಗೆ ಸಹಾಯಧನವನ್ನು ಪಾವತಿಸುವುದು.
3. ಕೃಷಿ ಹೊಂಡದ ಸುತ್ತಲೂ ತಂತಿ ಬೇಲಿ ನಿರ್ಮಿಸಿದ ನಂತರ ಮಾರ್ಗಸೂಚಿಯನ್ವಯ ಸಹಾಯಧನವನ್ನು ರೈತರ ಖಾತೆಗೆ ನೇರವಾಗಿ ಜಮೆ ಮಾಡುವುದು.
4. ವಿಷಯ ಸೂಚಿ 4.5 ಮತ್ತು 4.6 ರಂತೆ ಡೀಸೆಲ್/ ಪೆಟ್ರೋಲ್ ಪಂಪ್ ಸೆಟ್ ಮತ್ತು ಸೂಕ್ಷ್ಮ ನೀರಾವರಿ ಘಟಕಗಳಿಗೆ ಸಂಬಂಧಿಸಿದ ಸಹಾಯಧನವನ್ನು ಸರಬರಾಜು ಸಂಸ್ಥೆಗೆ ಪಾವತಿಸುವುದು.
5. ಡೀಸಲ್/ ಪೆಟ್ರೋಲ್ ಪಂಪ್ ಸೆಟ್ ಬದಲಾಗಿ, ಸೋಲಾರ್ ಪಂಪ್ ಸೆಟ್ ಘಟಕವನ್ನು ಇತರೆ ಇಲಾಖೆಗಳ ಚಾಲ್ತಿ ಯೋಜನೆಗಳಿಂದ ಪಡೆದು ಅಳವಡಿಸಿಕೊಂಡಿದ್ದಲ್ಲಿ ಪ್ರೋತ್ಸಾಹಧನವಾಗಿ ಪ್ರತಿ ಘಟಕಕ್ಕೆ ರೂ. 30,000/- ಗಳನ್ನು ಕೃಷಿ ಭಾಗ್ಯ ಯೋಜನೆಯಡಿ ವೆಚ್ಚ ಭರಿಸುವುದು.
6. ಕೃಷಿ ಭಾಗ್ಯ ಯೋಜನೆ ಪ್ಯಾಕೇಜ್ ಅಡಿ ಬರುವ ಆರು ಘಟಕ ಹಾಗೂ ಸೂಚನಾ ಫಲಕ ಅನುಷ್ಠಾನ ಮತ್ತು K-KISAN Mobile App ನಲ್ಲಿ ಎಲ್ಲಾ ಅಂತಗಳನ್ನು ದಾಖಲೀಕರಿಸಿದ ನಂತರ ಉಳಿಕೆ ಶೇ.25 ರಷ್ಟು ಸಹಾಯಧನದ ಮೊತ್ತವನ್ನು ರೈತರ ಖಾತೆಗೆ ಜಮೆ ಮಾಡುವುದು.

**ಕೃಷಿ ಭಾಗ್ಯ ಯೋಜನೆಯ ಜಿಲ್ಲಾ ಮಟ್ಟದ ಸಮನ್ವಯ ಸಮಿತಿ:**

| | |
|---|---|
| ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳು (ಜಿಲ್ಲಾ ಪಂಚಾಯತ್) | ಅಧ್ಯಕ್ಷರು |
| ಜಂಟಿ ನಿರ್ದೇಶಕರು, ತೋಟಗಾರಿಕೆ ಇಲಾಖೆ | ಸದಸ್ಯರು |
| ಉಪ ನಿರ್ದೇಶಕರು, ರೇಷ್ಮೆ ಇಲಾಖೆ | ಸದಸ್ಯರು |
| ಉಪ ನಿರ್ದೇಶಕರು, ಪಶು ವೈದ್ಯಕೀಯ ಮತ್ತು ಸಂಗೋಪನಾ ಇಲಾಖೆ | ಸದಸ್ಯರು |
| ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು, ಕೃಷಿ ಇಲಾಖೆ | ಸದಸ್ಯ ಕಾರ್ಯದರ್ಶಿ |

**ಸದರಿ ಸಮಿತಿಯು ಈ ಕೆಳಗಿನಂತೆ ಕಾರ್ಯ ನಿರ್ವಹಿಸುವುದು.**

1. ಯೋಜನೆಯ ಜಿಲ್ಲಾ ಮಟ್ಟದ ಪ್ರಗತಿಯ ಉಸ್ತುವಾರಿ ನೋಡಿಕೊಳ್ಳುವುದು.
2. ಆಯ್ಕೆಯಾದ ಫಲಾನುಭವಿಗಳ ಸಮಗ್ರ ಅಭಿವೃದ್ಧಿಗಾಗಿ ಮತ್ತು ಸುಸ್ಥಿರ ಕೃಷಿಯನ್ನು ರೂಪಿಸಲು ಇತರೆ ಇಲಾಖೆಗಳಿಂದ ಜೀವನೋಪಾಯಕ್ಕೆ ಸಂಬಂಧಿಸಿದ ಘಟಕಗಳ ಅನುಷ್ಠಾನಗೊಳಿಸುವುದು.
3. ಜಿಲ್ಲಾ ಮಟ್ಟದ ಸಮನ್ವಯ ಸಮಿತಿಯು, ಅಗತ್ಯಕ್ಕೆ ಅನುಗುಣವಾಗಿ ಕಾಲಕಾಲಕ್ಕೆ ಸಭೆಯನ್ನು ನಡೆಸುವುದು ಹಾಗೂ ಪ್ರತಿ ಮಾಹೆಯಲ್ಲಿ ಒಮ್ಮೆ ಸಭೆಯನ್ನು ಕಡ್ಡಾಯವಾಗಿ ನಡೆಸುವುದು.

**ಫಲಾನುಭವಿಗಳಿಗೆ ಷರತ್ತು ಬದ್ಧ ಕಾರ್ಯಾದೇಶ ನೀಡುವ ಬಗ್ಗೆ:**

1. ಆಡಳಿತಾತ್ಮಕ ಮಂಜೂರಾತಿ ಆದೇಶ/ ಕಾರ್ಯಾದೇಶದಲ್ಲಿ **(Work Order)** ಫಲಾನುಭವಿಗೆ ಕಾಮಗಾರಿಗಳನ್ನು ಕಾಲವಿಳಂಬವಿಲ್ಲದೆ ಪ್ರಾರಂಭಿಸಿ 15-30 ದಿನಗಳೊಳಗೆ ಕಾರ್ಯ ಪೂರ್ಣಗೊಳಿಸುವಂತೆ ಆದೇಶ ನೀಡುವುದು.
2. ಮಂಜೂರಾತಿ ಆದೇಶ ನೀಡಿದ ನಂತರ ಫಲಾನುಭವಿಯು 15-30 ದಿನಗಳೊಳಗೆ ಕಾರ್ಯ ಪೂರ್ಣಗೊಳಿಸದೇ ಇದ್ದಲ್ಲಿ ಅರ್ಜಿಯನ್ನು ರದ್ದುಪಡಿಸುವ ಬಗ್ಗೆ ರೈತರಿಂದ ಮುಚ್ಚಳಿಕೆ ಪಡೆಯುವುದು.
3. ಕೃಷಿ ಭಾಗ್ಯ ಯೋಜನೆಯಡಿ ಕ್ಷೇತ್ರ ಬದು, ಕೃಷಿ ಹೊಂಡ, ಪಾಲಿಥೀನ್ ಹೊದಿಕೆ ಮತ್ತು ಕೃಷಿ ಹೊಂಡದ ಸುತ್ತಲು ತಂತಿ ಬೇಲಿ ಘಟಕಗಳು ಹಾಗೂ ಸೂಚನಾ ಫಲಕ ಅಳವಡಿಸುವುದು ಕಡ್ಡಾಯವಾಗಿದ್ದು ಸದರಿ ಘಟಕಗಳ ಸಹಾಯಧನವನ್ನು ನಿಯಮಾನುಸಾರ ಪಾವತಿಸುವುದು.
4. ನೀರು ಹರಿಯುವ ದಾರಿಗಳ ರಚನೆ ಮಾಡುವುದು ಹಾಗೂ ಕೃಷಿ ಹೊಂಡ ನಿರ್ವಹಣೆ ಸಂಪೂರ್ಣ ರೈತರ ಜವಾಬ್ದಾರಿಯಾಗಿರುತ್ತದೆ.

**ಯೋಜನೆಯ ಉಸ್ತುವಾರಿ:**

- ಫಲಾನುಭವಿಯು ಒಂದೇ ಇಲಾಖೆಯಿಂದ ಹಾಗೂ ಒಂದೇ ಯೋಜನೆಯಿಂದ ಸಹಾಯಧನವನ್ನು ಪಡೆಯುವುದನ್ನು ಖಾತ್ರಿ ಪಡಿಸಿಕೊಳ್ಳಲು, ಯೋಜನೆಯನ್ನು ಅನುಷ್ಠಾನಗೊಳಿಸುತ್ತಿರುವ ಇತರೆ ಇಲಾಖೆಗಳ ತಾಲ್ಲೂಕು ಮಟ್ಟದ ಅಧಿಕಾರಿಗಳಿಂದ ದೃಢೀಕರಣ ಪಡೆಯುವುದು. (No Objection Certificate)
- ತಾಲ್ಲೂಕು ಮಟ್ಟದಲ್ಲಿ ಪ್ರಗತಿ ಪರಿಶೀಲನೆಗಾಗಿ ಪ್ರತಿ 15 ದಿನಗಳಿಗೊಮ್ಮೆ ಸಭೆ ನಡೆಸುವುದು.

**ಕೃಷಿ ಭಾಗ್ಯ ತಂತ್ರಾಂಶ:**

- ಸ್ವೀಕೃತವಾದ ಎಲ್ಲಾ ಅರ್ಜಿಗಳನ್ನು ತಂತ್ರಾಂಶದಲ್ಲಿ ದಾಖಲಿಸುವುದು. ವಿವರಗಳನ್ನು ದಾಖಲಿಸಲು ಕೃಷಿ ಭಾಗ್ಯ ಯೋಜನೆಯಡಿ Data Entry Operator ಸೇವೆಗಳನ್ನು ಬಳಸಿಕೊಳ್ಳುವುದು.
- ಕಾರ್ಯಾದೇಶವನ್ನು ಕಡ್ಡಾಯವಾಗಿ ತಂತ್ರಾಂಶದ ಮೂಲಕವೇ ನೀಡುವುದು ಹಾಗೂ ತಂತ್ರಾಂಶದಲ್ಲಿ ಗಣಕೀಕರಿಸಿದ ನಂತರವೇ ವೆಚ್ಚ ಭರಿಸಲು ಸೂಚಿಸಿದೆ.
- ಎಲ್ಲಾ ಘಟಕಗಳ GPS Co-ordinates ಮಾಹಿತಿ ಒಳಗೊಂಡ ಛಾಯಾಚಿತ್ರಗಳನ್ನು ತಂತ್ರಾಂಶದ ಮೂಲಕ upload ಮಾಡುವುದು.

**ವಿಶೇಷ ಸೂಚನೆ:** 2025-26 ನೇ ಸಾಲಿನಲ್ಲಿ ಕೃಷಿ ಭಾಗ್ಯ ಯೋಜನೆಯಡಿ ನಿರ್ಮಿಸಿದ ಕೃಷಿ ಹೊಂಡಗಳ ಉಳಿಕೆ ಪ್ಯಾಕೇಜ್‌ಗಳನ್ನು ಪೂರ್ಣಗೊಳಿಸಲು 2026-27 ನೇ ಸಾಲಿನ ಕ್ರಿಯಾಯೋಜನೆಯಲ್ಲಿ ಜಿಲ್ಲೆಗಳಿಗೆ ವರ್ಗವಾರು ನಿಗದಿಪಡಿಸಿರುವ ಅನುದಾನದಲ್ಲಿ ಶೇ. 20 ರಷ್ಟು ಮೀರದಂತೆ ವೆಚ್ಚ ಭರಿಸುವುದು, ಹೆಚ್ಚುವರಿ ಅನುದಾನ ಅವಶ್ಯವಿದ್ದಲ್ಲಿ ಕೇಂದ್ರ ಕಚೇರಿಯ ಅನುಮತಿ ಪಡೆದು ಪ್ರಸಕ್ತ ಸಾಲಿಗೆ ಆಯಾ ಜಿಲ್ಲೆಗೆ ನಿಗದಿಪಡಿಸಿರುವ ವಾರ್ಷಿಕ ಕ್ರಿಯಾಯೋಜನೆಯಲ್ಲಿ ಸರಿದೂಗಿಸಿಕೊಳ್ಳುವುದು.

**ಲಗತ್ತುಗಳು:**

1. **ನಮೂನೆ-1** : ರೈತರ ಅರ್ಜಿ ನಮೂನೆ
2. **ಅನುಬಂಧ- A1 ರಿಂದ A3**: 2026-27 ನೇ ಸಾಲಿನ ಕೃಷಿ ಭಾಗ್ಯ ಯೋಜನೆಯ ವಾರ್ಷಿಕ ಕ್ರಿಯಾ ಯೋಜನೆ
3. **ಅನುಬಂಧ- 1**: ಜಲಾನಯನ ಅಭಿವೃದ್ಧಿ ಇಲಾಖೆ ಅನುಮೋದಿತ ಕ್ಷೇತ್ರ ಬದು ಹಾಗೂ ಕೃಷಿ ಹೊಂಡದ ಅಂದಾಜು ಪತ್ರಿಕೆಗಳು ಹಾಗೂ ವಿನ್ಯಾಸ
4. **ಅನುಬಂಧ- 2**: ವಿವಿಧ ಆಳತೆಯ ಕೃಷಿ ಹೊಂಡಕ್ಕೆ ಅಳವಡಿಸುವ ಪಾಲೀಥೀನ್ ಹೊದಿಕೆಗಳ ಅಳತೆ ಹಾಗೂ ವಿನ್ಯಾಸ
5. **ಅನುಬಂಧ- 3**: ಜಿಲ್ಲಾವಾರು ಪಾಲಿಥೀನ್ ಹೊದಿಕೆಯ ಗುಣ ನಿಯಂತ್ರಣ ಮಾದರಿ ಗುರಿ
6. **ಅನುಬಂಧ- 4**: ತಂತಿ ಬೇಲಿ ಘಟಕದ ಅನುಮೋದಿತ ಅಂದಾಜು ಪತ್ರಿಕೆ ಹಾಗೂ ವಿನ್ಯಾಸ
7. **ಅನುಬಂಧ- 5**: ಕೃಷಿ ಭಾಗ್ಯ ಪ್ಯಾಕೇಜ್‌ನ ಘಟಕವಾರು ಸಹಾಯಧನ & ರೈತವಂತಿಕೆ ವಿವರ

**ಕೃಷಿ ನಿರ್ದೇಶಕರು**